Re. · No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं–1 | नई दिल्ली, सोमवार, मे 5 -1997 | वैशाख 15, 1919 (शक) | खण्ड–16 |
| No. 1 | New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ | ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |


## Ministry of Law, Justice & Company Affairs

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869— ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ವಿವಾಹ ವಿಚ್ಛೇದನ ಅಧಿನಿಯಮ, 1869

## (1869ರ ಸಂಖ್ಯೆ 4)

[26ನೇ ಫೆಬ್ರವರಿ, 1869.]

ವಿವಾಹ ವಿಚ್ಛೇದನ ಮತ್ತು ವೈವಾಹಿಕ ವ್ಯಾಜ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವ ಅಧಿನಿಯಮ.

**ಪ್ರಸ್ತಾವನೆ.–** ಕ್ರೈಸ್ತ ಧರ್ಮವನ್ನು ಅವಲಂಬಿಸಿರುವ ವ್ಯಕ್ತಿಗಳ ವಿವಾಹ ವಿಚ್ಛೇದನಕ್ಕೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವುದು ಮತ್ತು ವೈವಾಹಿಕ ವಿಷಯಗಳಲ್ಲಿ ಅಧಿಕಾರವ್ಯಾಪ್ತಿಯನ್ನು ಕೆಲವು ನ್ಯಾಯಾಲಯಗಳಿಗೆ ಪ್ರದಾನ ಮಾಡುವುದು ವಿಹಿತವಾಗಿರುವುದರಿಂದ, ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

### I.– ಪ್ರಾರಂಭಿಕ

**1. ಚಿಕ್ಕ ಹೆಸರು, ಅಧಿನಿಯಮದ ಪ್ರಾರಂಭ.–** (1) ಈ ಅಧಿನಿಯಮವನ್ನು ವಿವಾಹ ವಿಚ್ಛೇದನ ಅಧಿನಿಯಮ, 1869 ಎಂದು ಕರೆಯತಕ್ಕದ್ದು ಮತ್ತು ಇದು, 1869ನೇ ಏಪ್ರಿಲ್ ಮೊದಲನೇ ದಿನದಿಂದ ಜಾರಿಗೆ ಬರತಕ್ಕದ್ದು.

**2. ಅಧಿನಿಯಮದ ವ್ಯಾಪ್ತಿ.–** ಈ ಅಧಿನಿಯಮವು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**ಸಾಮಾನ್ಯವಾಗಿ ಪರಿಹಾರವನ್ನು ಕೊಡುವ ಮತ್ತು ವಿಘಟನಾ ಡಿಕ್ರಿಗಳನ್ನು ಮಾಡುವ ಅಥವಾ ಅನೂರ್ಜಿತಗೊಳಿಸುವ ಅಧಿಕಾರದ ವ್ಯಾಪ್ತಿ.–** ಇದರಲ್ಲಿ ಇನ್ನು ಮುಂದೆ ಅಡಕವಾಗಿರುವುದು ಯಾವುದೂ ಅರ್ಜಿದಾರ ಅಥವಾ ಪ್ರತಿ ಅರ್ಜಿದಾರನು ಕ್ರೈಸ್ತ ಧರ್ಮವನ್ನು ಅವಲಂಬಿಸಿರುವ ಹೊರತು ಈ ಅಧಿನಿಯಮದ ಮೇರೆಗೆ ಯಾವುದೇ ಪರಿಹಾರವನ್ನು ಕೊಡಲು,

ಅಥವಾ ಅರ್ಜಿಯನ್ನು ದಾಖಲು ಮಾಡಿದ ಕಾಲದಲ್ಲಿ ವಿವಾಹದ ಪಕ್ಷಕಾರರು ಭಾರತದಲ್ಲಿ ಅಧಿವಾಸಿಗಳಾಗಿರುವ ಹೊರತು ವಿವಾಹದ ವಿಘಟನೆಯ ಡಿಕ್ರಿಗಳನ್ನು ಮಾಡಲು,

ಅಥವಾ ಭಾರತದಲ್ಲಿ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿರುವಲ್ಲಿ ಮತ್ತು ಅರ್ಜಿದಾರನು/ಳು ಅರ್ಜಿಯನ್ನು ಸಲ್ಲಿಸಿದ ಕಾಲದಲ್ಲಿ ಭಾರತದಲ್ಲಿ ನಿವಾಸಿಯಾಗಿದ್ದ ಹೊರತು ವಿವಾಹದ ಅನೂರ್ಜಿತದ ಡಿಕ್ರಿಗಳನ್ನು ಮಾಡಲು,

ಅಥವಾ ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಅರ್ಜಿದಾರನು ಭಾರತದಲ್ಲಿ ನಿವಾಸಿಯಾಗಿರುವ ಹೊರತು, ವಿವಾಹದ ವಿಘಟನೆಯ ಅಥವಾ ವಿವಾಹದ ಅನೂರ್ಜಿತದ ಡಿಕ್ರಿಯನ್ನು ಹೊರತುಪಡಿಸಿ

ಈ ಅಧಿನಿಯಮದ ಮೇರೆಗೆ ಯಾವುದೇ ಪರಿಹಾರವನ್ನು ಕೊಡಲು ಯಾವುದೇ ನ್ಯಾಯಾಲಯವನ್ನು ಅಧಿಕೃತಗೊಳಿಸತಕ್ಕದ್ದಲ್ಲ.

**3. ಅರ್ಥ ವಿವರಣ ಖಂಡ.–** ಈ ಅಧಿನಿಯಮದಲ್ಲಿ, ವಿಷಯ ಅಥವಾ ಸಂದರ್ಭದಲ್ಲಿ ಏನಾದರೂ ವಿರುದ್ಧವಾದುದು ಇದ್ದ ಹೊರತು,–

(1) "ಉಚ್ಚ ನ್ಯಾಯಾಲಯ" ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ, "ಉಚ್ಚ ನ್ಯಾಯಾಲಯ" ಎಂದರೆ:–

(ಎ) ಒಂದು ರಾಜ್ಯದಲ್ಲಿ, ಆ ರಾಜ್ಯಕ್ಕಾಗಿನ ಉಚ್ಚ ನ್ಯಾಯಾಲಯ;

(ಬಿ) ದೆಹಲಿಯಲ್ಲಿ, ದೆಹಲಿ ಉಚ್ಚ ನ್ಯಾಯಾಲಯ;

(ಬಿಬಿ) ಹಿಮಾಚಲ ಪ್ರದೇಶದಲ್ಲಿ, 1967ರ ಏಪ್ರಿಲ್, 30 ರವರೆಗೆ ಆ ದಿವಸವೂ ಸೇರಿ ಪಂಜಾಬ್ ಮತ್ತು ಹರಿಯಾಣದ ಉಚ್ಚ ನ್ಯಾಯಾಲಯ ಮತ್ತು ಆ ತರುವಾಯ ದೆಹಲಿ ಉಚ್ಚ ನ್ಯಾಯಾಲಯ;

(ಸಿ) ಮಣಿಪುರ ಮತ್ತು ತ್ರಿಪುರಗಳಲ್ಲಿ ಅಸ್ಸಾಂನ ಉಚ್ಚ ನ್ಯಾಯಾಲಯ;

(ಡಿ) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಕಲ್ಕತ್ತಾದ ಉಚ್ಚ ನ್ಯಾಯಾಲಯ;

(ಇ) ಲಕ್ಷದ್ವೀಪದಲ್ಲಿ, ಕೇರಳದ ಉಚ್ಚ ನ್ಯಾಯಾಲಯ;

(ಇಇ) ಚಂಡೀಘಡದಲ್ಲಿ, ಪಂಜಾಬ್ ಮತ್ತು ಹರಿಯಾಣದ ಉಚ್ಚ ನ್ಯಾಯಾಲಯ

ಮತ್ತು ಈ ಅಧಿನಿಯಮದ ಮೇರೆಗಿನ ಯಾವುದೇ ಅರ್ಜಿಯ ಸಂಬಂಧದಲ್ಲಿ, "ಉಚ್ಚ ನ್ಯಾಯಾಲಯ" ಎಂದರೆ, ಗಂಡ ಮತ್ತು ಹೆಂಡತಿ ಯಾವ ಪ್ರದೇಶದಲ್ಲಿ ವಾಸಿಸುತ್ತಿರುವರೋ ಅಥವಾ ಕೊನೆಯಲ್ಲಿ ಒಟ್ಟಾಗಿ ವಾಸಿಸುತ್ತಿದ್ದರೋ ಆ ಪ್ರದೇಶದ ಉಚ್ಚ ನ್ಯಾಯಾಲಯ;

(2) "ಜಿಲ್ಲಾ ನ್ಯಾಯಾಧೀಶ" ಎಂದರೆ, ಯಾವುದೇ ಪದನಾಮವಿರಲಿ, ಮೂಲತಃ ಆ ಪ್ರದೇಶದ ಅಧಿಕಾರವ್ಯಾಪ್ತಿಯ ಪ್ರಧಾನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ;

(3) "ಜಿಲ್ಲಾ ನ್ಯಾಯಾಲಯ" ಎಂದರೆ, ಈ ಅಧಿನಿಯಮದ ಮೇರೆಗಿನ ಯಾವುದೇ ಅರ್ಜಿಯ ಸಂದರ್ಭದಲ್ಲಿ, ಈ ಅಧಿನಿಯಮದ ಮೇರೆಗೆ ಯಾವ ಜಿಲ್ಲಾ ನ್ಯಾಯಾಧೀಶನ ಸಾಮಾನ್ಯ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಅಥವಾ ಅಧಿಕಾರವ್ಯಾಪ್ತಿಯೊಳಗೆ ವಿವಾಹವನ್ನು ನೇರವೇರಿಸಲಾಯಿತೋ ಅಥವಾ ಗಂಡ ಮತ್ತು ಹೆಂಡತಿ ಒಟ್ಟಾಗಿ ವಾಸವಾಗಿರುವರೋ ಅಥವಾ ಕೊನೆಯಲ್ಲಿ ಒಟ್ಟಾಗಿ ವಾಸವಾಗಿದ್ದರೋ ಆ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯ;

(4) "ನ್ಯಾಯಾಲಯ" ಎಂದರೆ, ಸಂದರ್ಭಾನುಸಾರ ಉಚ್ಚ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಲಯ;

(5) "ಅಪ್ರಾಪ್ತ ವಯಸ್ಕ ಮಕ್ಕಳು" ಎಂದರೆ, ಸ್ವಂತ ತಂದೆಯ ಗಂಡು ಮಕ್ಕಳ ಸಂದರ್ಭದಲ್ಲಿ, ಹದಿನಾರು ವರ್ಷ ವಯಸ್ಸನ್ನು ಪೂರೈಸದಿರುವ ಹುಡುಗರು ಮತ್ತು ಸ್ವಂತ ತಂದೆಯ ಹೆಣ್ಣು ಮಕ್ಕಳ ಸಂದರ್ಭದಲ್ಲಿ ಹದಿಮೂರು ವರ್ಷ ವಯಸ್ಸನ್ನು ಪೂರೈಸದಿರುವ ಹುಡುಗಿಯರು; ಇತರ ಸಂದರ್ಭಗಳಲ್ಲಿ ಹದಿನೆಂಟು ವರ್ಷಗಳ ವಯಸ್ಸನ್ನು ಪೂರೈಸದಿರುವ ಅವಿವಾಹಿತ ಮಕ್ಕಳು;

(6) ******;

(7) ******;

(8) "ಬೇರೊಬ್ಬ ಮಹಿಳೆಯೊಂದಿಗೆ ವಿವಾಹ" ಎಂದರೆ, ಈಗಾಗಲೇ ವಿವಾಹವಾಗಿದ್ದು, ಎರಡನೇ ವಿವಾಹವು ಭಾರತದ ಒಳಗೇ ಆಗಲಿ ಅಥವಾ ಬೇರೆಡೆಯೇ ಆಗಿದ್ದಿರಲಿ, ಮೊದಲ ಹೆಂಡತಿಯ ಜೀವಿತ ಕಾಲದಲ್ಲಿ ಯಾರೇ ಇತರ ವ್ಯಕ್ತಿಯೊಂದಿಗೆ, ಯಾರೇ ವ್ಯಕ್ತಿಯು ಮಾಡಿಕೊಂಡಿರುವ ವಿವಾಹ;

(9) "ಪರಿತ್ಯಾಗ" ಎಂದರೆ, ಅದನ್ನು ಆರೋಪಿಸುವ ವ್ಯಕ್ತಿಯ ಇಚ್ಛೆಗೆ ವಿರುದ್ಧವಾಗಿ ಪರಿತ್ಯಜಿಸುವುದು; ಮತ್ತು

(10) "ಸ್ವತ್ತು" ಇದು, ಹೆಂಡತಿಯ ಸಂದರ್ಭದಲ್ಲಿ, ಯಾವುದಕ್ಕೆ ಅವಳು ಶೇಷ ಸಂಪದ ಅಥವಾ ಉತ್ತರಭೋಗಕ್ಕಾಗಿ ನ್ಯಾಸಧಾರಿ ಅಥವಾ ಕಾರ್ಯನಿರ್ವಾಹಕಿ ಅಥವಾ ಆಡಳಿತಗಾರ್ತಿಯಾಗಿ ಹಕ್ಕುಳ್ಳವಳಾಗಿರುವಳೋ ಆ ಯಾವುದೇ ಸ್ವತ್ತು; ಮತ್ತು ಮರಣಶಾಸನಕರ್ತ ಅಥವಾ ಮರಣಶಾಸನವಿಲ್ಲದೆ ಮರಣ ಹೊಂದಿದವನ ಮರಣದ ದಿನಾಂಕವನ್ನು ಯಾವ ಕಾಲದಲ್ಲಿ

ಯಾರೇ ಅಂಥ ಹೆಂಡತಿಯ ಕಾರ್ಯನಿರ್ವಾಹಕಿಯಾಗಿ ಅಥವಾ ಆಡಳಿತಗಾರ್ತಿಯಾಗಿ ಹಕ್ಕುಳ್ಳವಳಾಗುವಳೋ ಆ ಕಾಲವೆಂದು ಭಾವಿಸತಕ್ಕದ್ದು.

## II.- ಅಧಿಕಾರವ್ಯಾಪ್ತಿ

**4. ಈ ಅಧಿನಿಯಮಕ್ಕೊಳಪಟ್ಟು ಉಚ್ಚ ನ್ಯಾಯಾಲಯಗಳು ಚಲಾಯಿಸಬೇಕಾದ ವೈವಾಹಿಕ ಅಧಿಕಾರವ್ಯಾಪ್ತಿ ವಿನಾಯಿತಿ.–** ಸಹವಾಸ ವಿಚ್ಛೇದನೆಯ ಸಂಬಂಧದಲ್ಲಿ ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಮತ್ತು ವಿವಾಹಕ್ಕೆ ಸಂಬಂಧಿಸಿದ ಇತರ ಎಲ್ಲ ವ್ಯಾಜ್ಯಗಳು, ದಾವೆಗಳು ಮತ್ತು ವಿಷಯಗಳಲ್ಲಿ ಉಚ್ಚ ನ್ಯಾಯಾಲಯಗಳು ಈಗ ಚಲಾಯಿಸುತ್ತಿರುವ ಅಧಿಕಾರವ್ಯಾಪ್ತಿಯನ್ನು ಈ ಅಧಿನಿಯಮದಲ್ಲಿ ಒಳಗೊಂಡ ಉಪಬಂಧಗಳಿಗೊಳಪಟ್ಟು, ಅಂಥ ನ್ಯಾಯಾಲಯಗಳು ಮತ್ತು ಜಿಲ್ಲಾ ನ್ಯಾಯಾಲಯಗಳು ಚಲಾಯಿಸತಕ್ಕದ್ದು ಮತ್ತು ಅನ್ಯಥಾ ಚಲಾಯಿಸತಕ್ಕದ್ದಲ್ಲ; ವಿವಾಹ ಲೈಸೆನ್ಸುಗಳನ್ನು ಮಂಜೂರು ಮಾಡುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಹೊರತು, ಅವುಗಳನ್ನು ಈ ಅಧಿನಿಯಮವನ್ನು ಅಂಗೀಕರಿಸದಿದ್ದರೆ ಹೇಗೋ ಹಾಗೆ ಮಂಜೂರು ಮಾಡಬಹುದು.

**5. ಇಲ್ಲಿಯವರೆಗೆ ಸರ್ವೋಚ್ಚ ಅಥವಾ ಉಚ್ಚ ನ್ಯಾಯಾಲಯವು ಮಾಡಿದ ಡಿಕ್ರಿಗಳು ಅಥವಾ ಆದೇಶಗಳ ಜಾರಿ.–** ಕ್ರೈಸ್ತ ಧರ್ಮದ ವಿಭಾಗದಲ್ಲಿ ಕುಳಿತು ಕಲ್ಕತ್ತ, ಮದರಾಸು ಅಥವಾ ಮುಂಬಯಿನ ಹಿಂದಿನ ಸರ್ವೋಚ್ಚ ನ್ಯಾಯಾಲಯ ಅಥವಾ ಯಾವುದೇ ವೈವಾಹಿಕ ವ್ಯಾಜ್ಯ ಅಥವಾ ವಿಷಯದಲ್ಲಿ ಅನುಕ್ರಮವಾಗಿ ಅವುಗಳ ವೈವಾಹಿಕ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವಲ್ಲಿ ಕುಳಿತು ಸದರಿ ಯಾವುದೇ ಉಚ್ಚ ನ್ಯಾಯಾಲಯವು ಮಾಡಿದ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಅನುಕ್ರಮವಾಗಿ ಸದರಿ ಉಚ್ಚ ನ್ಯಾಯಾಲಯಗಳು ಇಲ್ಲಿ ಇನ್ನು ಮುಂದೆ ತಿಳಿಸಿದಂತೆ ಅಂಥ ಡಿಕ್ರಿಯನ್ನು ಅಥವಾ ಆದೇಶವನ್ನು ಮೂಲತಃ ಈ ಅಧಿನಿಯಮದ ಮೇರೆಗೆ ಮಾಡಿದ ಡಿಕ್ರಿ ಅಥವಾ ಆದೇಶವಾಗಿದ್ದಿದ್ದರೆ ಹೇಗೋ ಹಾಗೆ, ಜಾರಿಗೊಳಿಸುವ ಅಥವಾ ಅದರೊಂದಿಗೆ ವ್ಯವಹರಿಸುವ ನ್ಯಾಯಾಲಯವು ಅದೇ ರೀತಿಯಲ್ಲಿ ಜಾರಿಗೊಳಿಸಬಹುದು ಮತ್ತು ಅವುಗಳೊಂದಿಗೆ ವ್ಯವಹರಿಸಬಹುದು.

**6. ಇತ್ಯರ್ಥದಲ್ಲಿರುವ ದಾವೆಗಳು.–** ಈ ಅಧಿನಿಯಮವು ಪ್ರವರ್ತನೆಗೆ ಬಂದಾಗ, ಯಾವುದೇ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವಂಥ ವೈವಾಹಿಕ ವ್ಯಾಜ್ಯಗಳು ಮತ್ತು ವಿಷಯಗಳ ಬಗೆಗಿನ ಎಲ್ಲಾ ದಾವೆಗಳು ಮತ್ತು ವ್ಯವಹರಣೆಗಳನ್ನು ಆದಷ್ಟುಮಟ್ಟಿಗೆ, ಅಂಥ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಅದರಲ್ಲಿ ಮೂಲತಃ ಹೂಡಲಾಗಿದ್ದಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು ಮತ್ತು ತೀರ್ಮಾನಿಸತಕ್ಕದ್ದು.

7. [ಬಿಟ್ಟುಬಿಡಲಾಗಿದೆ.]

**8. ಉಚ್ಚ ನ್ಯಾಯಾಲಯದ ಅಸಾಧಾರಣ ಅಧಿಕಾರವ್ಯಾಪ್ತಿ.–** ಉಚ್ಚ ನ್ಯಾಯಾಲಯವು, ಅದು ಸೂಕ್ತವೆಂದು ಯೋಚಿಸಿದಾಗಲೆಲ್ಲ ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರವ್ಯಾಪ್ತಿಯ ಪರಿಮಿತಿಗಳೊಳಗೆ, ಯಾವುದೇ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಈ ಅಧಿನಿಯಮದ ಮೇರೆಗೆ ಹೂಡಿದ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಅಲ್ಲಿಂದ ತೆಗೆದುಹಾಕಬಹುದು ಮತ್ತು ಮೂಲ ಅಧಿಕಾರವ್ಯಾಪ್ತಿಯ ನ್ಯಾಯಾಲಯದ ರೂಪದಲ್ಲಿ ಅಧಿವಿಚಾರಣೆ ಮಾಡಬಹುದು ಮತ್ತು ನಿರ್ಧರಿಸಬಹುದು.

**ದಾವೆಗಳನ್ನು ವರ್ಗಾವಣೆ ಮಾಡಲು ಅಧಿಕಾರ.–** ಉಚ್ಚ ನ್ಯಾಯಾಲಯವು, ಯಾವುದೇ ಅಂಥ ದಾವೆ ಅಥವಾ ವ್ಯವಹರಣೆಯನ್ನು ಸಹ ಹಿಂತೆಗೆದುಕೊಳ್ಳಬಹುದು ಮತ್ತು ಅದನ್ನು ವಿಚಾರಣೆಗಾಗಿ ಅಥವಾ ವಿಲೇವಾರಿಗಾಗಿ ಯಾವುದೇ ಇತರ ಅಂಥ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಬಹುದು.

**9. ಉಚ್ಚ ನ್ಯಾಯಾಲಯಕ್ಕೆ ಅಭಿಪ್ರಾಯ ಕೋರಿಕೆ.–** ಜಿಲ್ಲಾ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ಯಾವುದೇ ದಾವೆಯನ್ನು ವಿಚಾರಣೆ ಮಾಡುವುದಕ್ಕೆ ಮುಂಚಿನ ವ್ಯವಹರಣೆಗಳಲ್ಲಿ ಯಾವುದೇ ಹಂತದಲ್ಲಿ ಅಥವಾ ಅಂಥ ದಾವೆಯ ಯಾವುದೇ ತರುವಾಯದ ಹಂತದಲ್ಲಿ ಅಥವಾ ಅದರಲ್ಲಿನ ಡಿಕ್ರಿಯ ಅಥವಾ ಅದರ ಮೇಲಿನ ಆದೇಶದ ಅಮಲ್ಜಾರಿಯಲ್ಲಿ ಯಾವುದೇ ಕಾನೂನಿನ ಅಥವಾ ಕಾನೂನು ಬಲವನ್ನು ಹೊಂದಿರುವ ರೂಢಿಯ ಯಾವುದೇ ಪ್ರಶ್ನೆಯು ಉದ್ಭವಿಸಿದಾಗ,

ಆ ನ್ಯಾಯಾಲಯವು, ತಾನಾಗಿಯೆ ಆಗಲಿ ಅಥವಾ ಯಾರೇ ಪಕ್ಷಕಾರನ ಅರ್ಜಿಯ ಮೇಲೆ ಆಗಲಿ, ಆ ಪ್ರಕರಣದ ವಿವರಪತ್ರವನ್ನು ತಯಾರಿಸಬಹುದು ಮತ್ತು ಅದರ ಮೇಲೆ ಆ ನ್ಯಾಯಾಲಯದ ಸ್ವಂತ ಅಭಿಪ್ರಾಯದೊಂದಿಗೆ ಅದನ್ನು ಉಚ್ಚ ನ್ಯಾಯಾಲಯದ ತೀರ್ಮಾನಕ್ಕೆ ಒಪ್ಪಿಸಬಹುದು.

ಆ ಪ್ರಶ್ನೆಯು ವಿಚಾರಣೆಗೆ ಮುಂಚೆ ಅಥವಾ ಆ ವಿಚಾರಣೆಯ ಸಮಯದಲ್ಲಿ ಉದ್ಭವಿಸಿದರೆ, ಜಿಲ್ಲಾ ನ್ಯಾಯಾಲಯವು ಅಂಥ ವ್ಯವಹರಣೆಗಳನ್ನು ತಡೆಹಿಡಿಯಬಹುದು ಅಥವಾ ಅಂಥ ಅಭಿಪ್ರಾಯ ಕೋರಿಕೆಯು ಇತ್ಯರ್ಥದಲ್ಲಿರುವಾಗ ಆ ಪ್ರಕರಣದಲ್ಲಿ ಮುಂದುವರೆಯಬಹುದು ಮತ್ತು ಅದರ ಮೇಲೆ ಉಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಅವಲಂಬಿಸಿ ಡಿಕ್ರಿಯನ್ನು ಹೊರಡಿಸಬಹುದು.

ಡಿಕ್ರಿ ಅಥವಾ ಆದೇಶವನ್ನು ಮಾಡಲಾಗಿದ್ದರೆ, ಅಂಥ ಅಭಿಪ್ರಾಯ ಕೋರಿಕೆಯ ಮೇಲೆ ಉಚ್ಚ ನ್ಯಾಯಾಲಯದ ಆದೇಶವನ್ನು ಸ್ವೀಕರಿಸುವವರೆಗೆ, ಅದರ ಅಮಲ್ಜಾರಿಯನ್ನು ತಡಿಹಿಡಿಯತಕ್ಕದ್ದು.

## III.– ವಿವಾಹದ ವಿಘಟನೆ

**10. ವಿವಾಹದ ವಿಘಟನೆಗೆ ಕಾರಣಗಳು.–** (1) ಶಾಸ್ತ್ರೋಕ್ತವಾಗಿ ನೆರವೇರಿದ ಯಾವುದೇ ವಿವಾಹವನ್ನು, ಅದು ಭಾರತ ವಿವಾಹ ವಿಚ್ಛೇದನ (ತಿದ್ದುಪಡಿ) ಅಧಿನಿಯಮ, 2001 (2001ರ 51)ರ ಪ್ರಾರಂಭಕ್ಕೂ ಮುನ್ನ ಅಥವಾ ನಂತರ ನಡೆದಿರಲಿ, ಗಂಡ ಅಥವಾ ಹೆಂಡತಿಯು ಈ ಕೆಳಕಂಡ, ಅಂದರೆ ಪ್ರತಿವಾದಿಯು,–

(i) ಪರಸತಿ ಸಂಗ/ಪರಪುರುಷ ಸಂಗ ಮಾಡಿದ್ದಾನೆ/ಳೆ; ಅಥವಾ

(ii) ಮತ್ತೊಂದು ಧರ್ಮಕ್ಕೆ ಬದಲಾಯಿಸಿಕೊಳ್ಳುವ ಮೂಲಕ ಕ್ರೈಸ್ತ ಧರ್ಮವನ್ನು ಬಿಟ್ಟಿದ್ದಾನೆ/ಳೆ; ಅಥವಾ

(iii) ಅರ್ಜಿ ಸಲ್ಲಿಸುವ ನಿಕಟಪೂರ್ವ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ನಿರಂತರ ಅವಧಿಯವರೆಗೆ ವಾಸಿಯಾಗದ ಅಸ್ವಸ್ಥಚಿತ್ತದವನಾಗಿದ್ದಾನೆ/ಳೆ; ಅಥವಾ

(iv) ******.

(v) ಅರ್ಜಿ ಸಲ್ಲಿಸುವ ನಿಕಟಪೂರ್ವ ಎರಡು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಸೋಂಕು ರೂಪದ ಗುಹ್ಯ ರೋಗದಿಂದ ಬಳಲುತ್ತಿದ್ದಾನೆ/ಳೆ; ಅಥವಾ

(vi) ಪ್ರತಿವಾದಿಯ ಜೀವಂತವಾಗಿದ್ದದ್ದು, ಆ ಇಬ್ಬರು ವ್ಯಕ್ತಿಗಳು ಸಹಜ ಪ್ರತಿವಾದಿಗಳಾಗುವ ಮೂಲಕ ಏಳು ವರ್ಷಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಯವರೆಗೆ ಜೀವಂತವಾಗಿದ್ದು, ಪರಸ್ಪರ ಒಬ್ಬರಿಗೊಬ್ಬರೂ ಮಾತನಾಡದೆ/ಕಷ್ಟಸುಖ ಹಂಚಿಕೊಳ್ಳದೆ ದೂರ ದೂರವೇ ಉಳಿದಿರುವ; ಅಥವಾ

(vii) ಮದುವೆಯ ನಿಷೇಕ ಪ್ರಸ್ತ ಕಾರ್ಯವನ್ನು ಉದ್ದೇಶಪೂರ್ವಕವಾಗಿ ತಿರಸ್ಕರಿಸಿರುವುದು ಮತ್ತು ಇದರಿಂದ ಮದುವೆ ಎಂಬ ವಿಧಿವತ್ತಾದ ಕಾರ್ಯವು ಪೂರ್ಣಗೊಂಡಿಲ್ಲದಿರುವ; ಅಥವಾ

(viii) ಪ್ರತಿವಾದಿಯ ವಿರುದ್ಧ ಡಿಕ್ರಿ ಆದೇಶವನ್ನು ಹೊರಡಿಸಿದ ನಂತರ ಎರಡು ವರ್ಷಗಳ ಅಥವಾ ಅದಕ್ಕೂ ಹೆಚ್ಚಿನ ಅವಧಿಯವರೆಗೆ ದಾಂಪತ್ಯ ಹಕ್ಕುಗಳ ಪುನಃಪ್ರದಾನದ ಡಿಕ್ರಿ ಆದೇಶವನ್ನು ಪಾಲಿಸಿಲ್ಲದಿರುವ; ಅಥವಾ

(ix) ಅರ್ಜಿ ಸಲ್ಲಿಸುವ ನಿಕಟಪೂರ್ವ ಎರಡು ವರ್ಷಗಳವರೆಗೆ ಅರ್ಜಿದಾರನನ್ನು/ಳನ್ನು ಬಿಟ್ಟು ಹೋಗಿರುವ; ಅಥವಾ

(x) ಅರ್ಜಿದಾರನು/ಳು ಪ್ರತಿವಾದಿಯೊಂದಿಗೆ ಜೀವಿಸುವುದಕ್ಕೆ ಕಷ್ಟವಾಗುವ ಹಾಗೆ ಅಥವಾ ಹಾನಿಯಾಗುವಂತೆ ಪ್ರತಿವಾದಿಯ ನಡವಳಿಕೆಯಲ್ಲಿ ಯುಕ್ತ ಶಂಕೆ ಉಂಟಾಗಿದ್ದು, ಇಂಥ ಹಿಂಸಾತ್ಮಕ ರೀತಿಯಲ್ಲಿ ಅರ್ಜಿದಾರನನ್ನು/ಳನ್ನು ನಡೆಸಿಕೊಂಡಿದ್ದು

– ತಪ್ಪಿತಸ್ಥನಾಗಿರವನೆಂಬ ಕಾರಣದ ಮೇಲೆ ವಿವಾಹವನ್ನು ವಿಘಟನೆಗೊಳಿಸಬೇಕೆಂದು ಕೋರಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಹೆಂಡತಿಯನ್ನು ಸಹ, ತನ್ನ ವಿವಾಹ ನೆರವೇರಿದಾಗಿನಿಂದ ಗಂಡನು ಬಲಾತ್ಕಾರ ಸಂಭೋಗದ, ಪುಂಮೈಥುನದ ಅಥವಾ ಪಶುಗಮನದ ತಪ್ಪಿತಸ್ಥನಾಗಿರುವನೆಂಬ ಕಾರಣದ ಮೇಲೆ ವಿವಾಹದ ವಿಘಟನೆಗಾಗಿ ಅರ್ಜಿಯನ್ನು ಸಲ್ಲಿಸಬಹುದು.

**10ಎ. ಪರಸ್ಪರ ಸಹಮತಿಯ ಮೂಲಕ ವಿವಾಹದ ವಿಘಟನೆ.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರಡಿಯಲ್ಲಿ ರಚಿಸಿದ ನಿಯಮಗಳಿಗೆ ಒಳಪಟ್ಟು, ವಿವಾಹದ ವಿಘಟನೆಗಾಗಿ ಅರ್ಜಿಯನ್ನು; ಅಂಥ ವಿವಾಹವು ಭಾರತ ವಿವಾಹ ವಿಚ್ಛೇದನ (ತಿದ್ದುಪಡಿ) ಅಧಿನಿಯಮ, 2001 (2001ರ 51)ರ ಪ್ರಾರಂಭಕ್ಕೂ ಮುನ್ನ ನಂತರ ವಿಧಿವತ್ತಾಗಿ ನೇರವೇರಿದ್ದಾಗಿರಲಿ, ನಾವು ಎರಡು ವರ್ಷಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಯಿಂದ ಪ್ರತ್ಯೇಕವಾಗಿದ್ದೇವೆ ಎಂಬ ಮತ್ತು ನಾವು ಒಟ್ಟಾಗಿ ಜೀವಿಸಲು ಸಾಧ್ಯವಾಗುವುದಿಲ್ಲ ಎಂಬ ಮತ್ತು ವಿವಾಹವನ್ನು ವಿಘಟನೆಗೊಳಿಸುವುದಕ್ಕೆ ನಾವು ಪರಸ್ಪರ ಒಪ್ಪಿಕೊಂಡಿದ್ದೇವೆ ಎಂಬ ಕಾರಣದ ಮೇಲೆ ಒಟ್ಟಿಗೆ ವಿವಾಹವಾದ ಇಬ್ಬರೂ ಪಕ್ಷಕಾರರು ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಬಹುದು.

(2) ಇಬ್ಬರೂ ಪಕ್ಷಕಾರರು ಮನವಿಯನ್ನು ಸಲ್ಲಿಸಿದ ಮೇಲೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂತೆ ಮನವಿಗಳನ್ನು ಸಲ್ಲಿಸಿದ ದಿನಾಂಕದ ನಂತರ ಆರು ತಿಂಗಳುಗಳಿಗಿಂತ ಮುಂಚಿತವಾಗಿಯಲ್ಲದೆ ಮತ್ತು ಸದರಿ ದಿನಾಂಕದ ನಂತರ ಹದಿನೆಂಟು ತಿಂಗಳುಗಳಿಗಿಂತ ಹೆಚ್ಚಾಗದಂತೆ,

ಸಕಾಲದಲ್ಲಿ ಇಬ್ಬರೂ ಪಕ್ಷಕಾರರು ಸದರಿ ಮನವಿಯನ್ನು ವಾಪಾಸ್ ಹಿಂಪಡೆಯದಿದ್ದರೆ, ನ್ಯಾಯಾಲಯವು, ಅದು ಸೂಕ್ತವೆಂದು ಪರಿಗಣಿಸಬಹುದಾದಂತೆ ಇಬ್ಬರೂ ಪಕ್ಷಕಾರರ ವಿಚಾರಣೆಯ ಮತ್ತು ಅಂಥ ವಿಚಾರಣೆಯ ತರುವಾಯ, ವಿವಾಹವು ವಿಧಿವತ್ತಾಗಿ ನೇರವೇರಿದೆ ಮತ್ತು ಅರ್ಜಿಯಲ್ಲಿನ ಪ್ರತಿಪಾದನೆಗಳು ಸತ್ಯವಾದವುಗಳಾಗಿವೆ ಎಂದು ಅದಕ್ಕೆ ಮನವರಿಕೆಯಾದ ನಂತರ ಡಿಕ್ರಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ವಿವಾಹವು ವಿಘಟನೆಯಾಗುತ್ತದೆ ಎಂದು ಘೋಷಿಸಿ ಡಿಕ್ರಿ ಆದೇಶವನ್ನು ಹೊರಡಿಸತಕ್ಕದ್ದು.

**11. ಪರಸತಿ ಸಂಗಿ ಅಥವಾ ಪರಪುರುಷ ಸಂಗಿಯು ಸಹ ಪ್ರತ್ಯರ್ಜಿದಾರನಾಗಿರತಕ್ಕದ್ದು.–** ವ್ಯಭಿಚಾರದ ಕಾರಣದ ಮೇಲೆ ಗಂಡ ಮತ್ತು ಹೆಂಡತಿಯು ಸಲ್ಲಿಸಿದ ವಿವಾಹದ ವಿಘಟನೆಯ ಅರ್ಜಿಗೆ ಸಂಬಂಧಿಸಿದಂತೆ, ಅರ್ಜಿದಾರನು, ಸದರಿ ಅರ್ಜಿಗೆ ಆರೋಪಿತ ಪರಸತಿ ಸಂಗಿಯನ್ನು ಅಥವಾ ಪರಪುರುಷ ಸಂಗಿಯನ್ನು ಸಹ–ಪ್ರತ್ಯರ್ಜಿದಾರನನ್ನಾಗಿ, ನ್ಯಾಯಾಲಯವು ಅನುಮತಿಸಬೇಕಾದ ಈ ಕೆಳಕಂಡ ಯಾವುದೇ ಕಾರಣಗಳ ಮೇಲೆ ಹಾಗೆ ಮಾಡುವುದರಿಂದ ವಿನಾಯಿತಿ ಕೊಟ್ಟ ಹೊರತು ಮಾಡತಕ್ಕದ್ದು, ಎಂದರೆ:–

(ಎ) ಪ್ರತ್ಯರ್ಜಿದಾರಳಾದ ಹೆಂಡತಿಯು ವೇಶ್ಯೆಯ ಜೀವನವನ್ನು ನಡೆಸುತ್ತಿದ್ದಾಳೆ ಅಥವಾ ಪ್ರತ್ಯರ್ಜಿದಾರನಾದ ಗಂಡನು ಅನೈತಿಕ ಜೀವನ ನಡೆಸುತ್ತಿದ್ದಾನೆ ಮತ್ತು ಯಾರೊಂದಿಗೆ ವ್ಯಭಿಚಾರವನ್ನು ಮಾಡಲಾಗಿದೆಯೋ ಆ ವ್ಯಕ್ತಿಯ ಅರ್ಜಿದಾರನಿಗೆ ತಿಳಿದಿದ್ದರೆ;

(ಬಿ) ಅರ್ಜಿದಾರನಿಗೆ ಆರೋಪಿತ ಪರಸತಿ ಸಂಗಿಯ ಅಥವಾ ಪರಪುರುಷ ಸಂಗಿಯ ಹೆಸರು, ಅದನ್ನು ಕಂಡುಹಿಡಿಯಲು ಅರ್ಜಿದಾರನು ಯುಕ್ತ ಪ್ರಯತ್ನಗಳನ್ನು ಮಾಡಿದ್ದಾಗ್ಯೂ ಅವನಿಗೆ ತಿಳಿದಿಲ್ಲದಿದ್ದರೆ;

(ಸಿ) ಆರೋಪಿತ ಪರಸತಿ ಸಂಗಿ ಅಥವಾ ಪರಪುರುಷ ಸಂಗಿಯು ಮರಣ ಹೊಂದಿದ್ದರೆ.

**12. ನ್ಯಾಯಾಲಯವು ಶಾಮೀಲು ಇಲ್ಲದಿರುವುದನ್ನು ಮನದಟ್ಟು ಮಾಡಿಕೊಳ್ಳುವುದು.–** ವಿವಾಹದ ವಿಘಟನೆಗಾಗಿ ಮಾಡಿಕೊಂಡ ಯಾವುದೇ ಅಂಥ ಅರ್ಜಿಯ ಮೇಲೆ, ನ್ಯಾಯಾಲಯವು, ಅದಕ್ಕೆ ಯುಕ್ತವಾಗಿ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಆರೋಪಿಸಿದ ಸಂಗತಿಗಳ ಬಗ್ಗೆ ಮಾತ್ರವಲ್ಲದೆ, ಅರ್ಜಿದಾರನು ಯಾವುದೇ ರೀತಿಯಲ್ಲಿ ಅದರ ರೀತಿಯ ವಿವಾಹವನ್ನು ಅಥವಾ ಪರಪುರುಷ ಸಂಗವನ್ನು ಮಾಡುವಲ್ಲಿ ಸಹಾಯಕನಾಗಿದ್ದನೋ ಅಥವಾ ಇಲ್ಲವೋ ಅಥವಾ ಅದಕ್ಕೆ ಪರೋಕ್ಷವಾಗಿ ಸಮ್ಮತಿಯನ್ನು ಕೊಟ್ಟಿದ್ದನೋ ಅಥವಾ ಇಲ್ಲವೋ ಎಂಬುದನ್ನು ಅಥವಾ ಅದನ್ನು ಮನ್ನಿಸಿರುವನೋ ಅಥವಾ ಇಲ್ಲವೋ

ಎಂಬುದನ್ನು ತಾನೇ ಮನದಟ್ಟು ಮಾಡಿಕೊಳ್ಳತಕ್ಕದ್ದು ಮತ್ತು ಅರ್ಜಿದಾರನ ವಿರುದ್ಧ ಮಾಡಬಹುದಾದಂಥ ಯಾವುದೇ ಆರೋಪವನ್ನು ಸಹ ವಿಚಾರಿಸತಕ್ಕದ್ದು.

**13. ಅರ್ಜಿಯನ್ನು ವಜಾ ಮಾಡುವುದು.–** ಯಾವುದೇ ಅಂಥ ಅರ್ಜಿಗೆ ಸಂಬಂಧಪಟ್ಟಂತೆ, ಸಾಕ್ಷ್ಯದ ಮೇಲೆ ಅರ್ಜಿದಾರನ ವಿಷಯವನ್ನು ರುಜುವಾತುಪಡಿಸಲಾಗಿಲ್ಲವೆಂದು ನ್ಯಾಯಾಲಯಕ್ಕೆ ಮನದಟ್ಟಾದ ಸಂದರ್ಭದಲ್ಲಿ ಅಥವಾ ಆರೋಪಿತ ಪರಪುರುಷ ಸಂಗವನ್ನು ಮಾಡಲಾಗಿರುವುದರ ಬಗ್ಗೆ ಅದಕ್ಕೆ ಮನದಟ್ಟಾಗದಿದ್ದರೆ;

ಅಥವಾ ಅರ್ಜಿದಾರನು ವಿವಾಹದ ಕಾಲದಲ್ಲಿ ಸದರಿ ರೀತಿಯ ವಿವಾಹವನ್ನು ಮಾಡಿಕೊಳ್ಳುವಲ್ಲಿ ಅಥವಾ ವಿವಾಹದ ಇನ್ನೊಂದು ಪಕ್ಷಕಾರನು ಪರಪುರುಷ ಸಂಗಕ್ಕೆ ಸಹಾಯಕನಾಗಿದ್ದನೆಂದು ಅಥವಾ ಅದಕ್ಕೆ ಪರೋಕ್ಷ ಸಮ್ಮತಿಯನ್ನು ನೀಡಿದ್ದನೆಂದು ಅಥವಾ ದೂರಿದ ಪರಪುರುಷ ಸಂಗವನ್ನು ಮನ್ನಿಸಿರುವನೆಂದು ನಿರ್ಣಯಿಸಿದರೆ;

ಅಥವಾ ಅರ್ಜಿಯನ್ನು ಪ್ರತ್ಯರ್ಜಿದಾರರಲ್ಲಿ ಯಾರಾದರೂ ಒಬ್ಬರೊಂದಿಗೆ ಶಾಮೀಲಾಗಿ ಸಲ್ಲಿಸಲಾಗಿದೆ ಅಥವಾ ಮುಂದುವರಿಸಲಾಗಿದೆ ಎಂದು ನಿರ್ಣಯಿಸಿದರೆ

– ಆಗ ಮತ್ತು ಅ ಯಾವುದೇ ಸದರಿ ಸಂದರ್ಭದಲ್ಲಿ ನ್ಯಾಯಾಲಯವು ಆ ಅರ್ಜಿಯನ್ನು ವಜಾ ಮಾಡತಕ್ಕದ್ದು.

**14. ವಿವಾಹವನ್ನು ವಿಘಟಿಸುವುದಕ್ಕಾಗಿ ಡಿಕ್ರಿಯನ್ನು ಉಚ್ಚರಿಸಲು ನ್ಯಾಯಾಲಯಕ್ಕೆ ಅಧಿಕಾರ.–** ಸಾಕ್ಷ್ಯದ ಮೇಲೆ ಅರ್ಜಿದಾರನ ವಿಷಯವು ರುಜುವಾತಾಗಿದೆ ಎಂದು ನ್ಯಾಯಾಲಯಕ್ಕೆ ಮನದಟ್ಟಾದಲ್ಲಿ;

ಮತ್ತು ಅರ್ಜಿದಾರನು ಸದರಿ ರೀತಿಯ ವಿವಾಹವನ್ನು ಮಾಡಿಕೊಳ್ಳುವಲ್ಲಿ ಅಥವಾ ವಿವಾಹದ ಇನ್ನೊಂದರ ಪಕ್ಷಕಾರನು ಪರಪುರುಷ ಸಂಗಕ್ಕೆ ಯಾವುದೇ ರೀತಿಯಲ್ಲಿ ಸಹಾಯಕನಾಗಿದ್ದನೆಂದು ಅಥವಾ ಅದಕ್ಕೆ ಪರೋಕ್ಷ ಸಮ್ಮತಿಯನ್ನು ನೀಡಿದ್ದನೆಂದು ಅಥವಾ ದೂರಿದ ಪರಪುರುಷ ಸಂಗವನ್ನು ಮನ್ನಿಸಿರುವನೆಂದು ನಿರ್ಣಯಿಸದಿದ್ದರೆ;

ಅಥವಾ ಅರ್ಜಿಯನ್ನು ಪ್ರತ್ಯರ್ಜಿದಾರರಲ್ಲಿ ಯಾರಾದರೂ ಒಬ್ಬರೊಂದಿಗೆ ಶಾಮೀಲಾಗಿ ಸಲ್ಲಿಸಲಾಗಿದೆ ಅಥವಾ ಮುಂದುವರಿಸಲಾಗಿದೆ ಎಂದು ನಿರ್ಣಯಿಸದಿದ್ದರೆ

– ನ್ಯಾಯಾಲಯವು ಅಂಥ ವಿವಾಹವು ವಿಘಟಿತವಾಗಿದೆ ಎಂದು ಘೋಷಿಸಿ ಡಿಕ್ರಿಯನ್ನು ಉಚ್ಚರಿಸತಕ್ಕದ್ದು:

ಪರಂತು, ನ್ಯಾಯಾಲಯವು, ಅರ್ಜಿದಾರನು ವಿವಾಹದ ಅವಧಿಯಲ್ಲಿ ಪರಸತಿ ಸಂಗದ ತಪ್ಪಿತಸ್ಥನಾಗಿದ್ದಾನೆಂದು ನಿರ್ಣಯಿಸಿದರೆ;

ಅಥವಾ ನ್ಯಾಯಾಲಯದ ಅಭಿಪ್ರಾಯದಲ್ಲಿ, ಅರ್ಜಿದಾರನು ಅಂಥ ಅರ್ಜಿಯನ್ನು ಸಲ್ಲಿಸುವಲ್ಲಿ ಅಥವಾ ನಡೆಸುವಲ್ಲಿ ಅನುಚಿತ ವಿಳಂಬದ;

ಅಥವಾ ವಿವಾಹದ ಇನ್ನೊಂದು ಪಕ್ಷಕಾರನಿಗೆ ಕ್ರೌರ್ಯದ;

ಅಥವಾ ದೂರಲಾದ ಪರಸತಿ/ಪರಪುರುಷ ಸಂಗಕ್ಕೆ ಮುಂಚೆ ಮತ್ತು ಯುಕ್ತ ಕಾರಣವಿಲ್ಲದೆ ಇನ್ನೊಂದು ಪಕ್ಷಕಾರನಿಂದ ಅವನಾಗಿಯೇ ಅಥವಾ ಅವಳಾಗಿಯೇ ತ್ಯಜಿಸಿದ ಅಥವಾ ಉದ್ದೇಶಪೂರ್ವಕವಾಗಿ ಪ್ರತ್ಯೇಕವಾದ

– ಅಥವಾ ಪರಸತಿ/ಪರಪುರುಷ ಸಂಗಕ್ಕೆ ಅನುವು ಮಾಡಿಕೊಟ್ಟಂತೆ ಇತರ ಪಕ್ಷಕಾರನ ಅಂಥ ಉದ್ದೇಶಪೂರ್ವಕ ನಿರ್ಲಕ್ಷ್ಯ ಅಥವಾ ದುರ್ನಡತೆಯ ತಪ್ಪಿತಸ್ಥನಾಗಿದ್ದರೆ ಅಂಥ ಡಿಕ್ರಿಯನ್ನು ಉಚ್ಚರಿಸಲು ಬದ್ಧವಾಗಿರತಕ್ಕದ್ದಲ್ಲ.

**ಮನ್ನಿಸುವಿಕೆ.–** ದಾಂಪತ್ಯ ಸಹವಾಸವನ್ನು ಪುನಃ ಪಡೆದ ಅಥವಾ ಮುಂದುವರಿಸಿದ ಹೊರತು, ಈ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ ಯಾವುದೇ ಪರಸತಿ/ಪರಪುರುಷ ಸಂಗವನ್ನು ಮನ್ನಿಸಲಾಗಿರುವುದಾಗಿ ಭಾವಿಸತಕ್ಕದ್ದಲ್ಲ.

**15. ಕೆಲವು ಕಾರಣಗಳ ಮೇಲೆ ಪ್ರತಿರೋಧದ ಸಂದರ್ಭದಲ್ಲಿ ಪರಿಹಾರ.–** ವಿವಾಹದ ವಿಘಟನೆಗಾಗಿ ಹೂಡಿದ ಯಾವುದೇ ದಾವೆಯಲ್ಲಿ, ಗಂಡನು ಹೂಡಿದ ಅಂಥ ದಾವೆಯ ಸಂದರ್ಭದಲ್ಲಿ, ಅವನ ಪರಸತಿ ಸಂಗ, ಕ್ರೌರ್ಯ ಅಥವಾ ಪರಿತ್ಯಾಗದ ಆಧಾರದ ಮೇಲೆ ಅಥವಾ ಹೆಂಡತಿಯು ಹೂಡಿದ ಅಂಥ ದಾವೆಯ ಸಂದರ್ಭದಲ್ಲಿ, ಅವಳ ವ್ಯಭಿಚಾರ ಮತ್ತು ಕ್ರೌರ್ಯದ ಅಥವಾ ಪರಿತ್ಯಾಗದ ಆಧಾರದ ಮೇಲೆ ಕೋರಲಾದ ಪರಿಹಾರವನ್ನು ಪ್ರತ್ಯರ್ಜಿದಾರನು/ಳು ಪ್ರತಿರೋಧಿಸಿದರೆ ನ್ಯಾಯಾಲಯವು ಅಂಥ ದಾವೆಯಲ್ಲಿ ಅವನ ಅಥವಾ ಅವಳ ಅರ್ಜಿಯ ಮೇಲೆ ಪ್ರತ್ಯರ್ಜಿದಾರನಿಗೆ/ಳಿಗೆ ಅಂಥ ಪರಿಹಾರವನ್ನು ಕೋರಿ ಅವನು ಅಥವಾ ಅವಳು ಅರ್ಜಿಯನ್ನು ಸಲ್ಲಿಸಿದ್ದ ಸಂದರ್ಭದಲ್ಲಿ ಅವನು/ಅವಳು ಹಕ್ಕುಳ್ಳವನಾಗುತ್ತಿದ್ದಂಥ/ಳಾಗುತ್ತಿದ್ದಂಥದೇ ಪರಿಹಾರವನ್ನು ಕೊಡಬಹುದು ಮತ್ತು ಪ್ರತ್ಯರ್ಜಿದಾರನು/ಳು

ಅಂಥ ಕ್ರೌರ್ಯ, ವ್ಯಭಿಚಾರ ಅಥವಾ ಪರಿತ್ಯಾಗದ ಸಂಬಂಧದಲ್ಲಿ ಸಾಕ್ಷ್ಯವನ್ನು ಕೊಡಲು ಸಕ್ಷಮನಾಗಿರತಕ್ಕದ್ದು/ಳಾಗಿರತಕ್ಕದ್ದು.

**16. ವಿಘಟನೆಗಾಗಿಯ ಡಿಕ್ರಿಗಳು ಷರತ್ತು ಪೂರ್ವಕವಾಗಿರತಕ್ಕದ್ದು.–** ಉಚ್ಚ ನ್ಯಾಯಾಲಯವು ಮಾಡಿದ ವಿವಾಹದ ವಿಘಟನೆಗಾಗಿನ ಪ್ರತಿಯೊಂದು ಡಿಕ್ರಿಯು, ಮೊದಲ ಬಾರಿಗೆ, ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸುವಂತೆ, ಅದನ್ನು ಉಚ್ಚರಿಸಿದ ದಿನದಿಂದ ಆರು ತಿಂಗಳುಗಳಿಗೆ ಕಡಿಮೆಯಿಲ್ಲದಂಥ ಕಾಲದ ಮುಕ್ತಾಯದ ತರುವಾಯದವರೆಗೆ ನಿರುಪಾಧಿಕವಾಗಿ ಮಾಡದಿರತಕ್ಕ ಷರತ್ತು ಪೂರ್ವಕ ಡಿಕ್ರಿಯಾಗಿರತಕ್ಕದ್ದು.

**ಶಾಮೀಲು.–** ಆ ಅವಧಿಯಲ್ಲಿ ಯಾರೇ ವ್ಯಕ್ತಿಯು, ಉಚ್ಚ ನ್ಯಾಯಾಲಯವು, ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸುವಂಥ ರೀತಿಯಲ್ಲಿ, ಆ ಡಿಕ್ರಿಯನ್ನು ಶಾಮೀಲು ಮೂಲಕ ಪಡೆದುಕೊಳ್ಳಲಾದ ಕಾರಣದಿಂದ ಅಥವಾ ಮುಖ್ಯ ಸಂಗತಿಗಳನ್ನು ನ್ಯಾಯಾಲಯದ ಮುಂದೆ ತರದಿದ್ದ ಕಾರಣದಿಂದ ಸದರಿ ಡಿಕ್ರಿಯನ್ನು ಏಕೆ ನಿರುಪಾಧಿಕವಾಗಿ ಮಾಡತಕ್ಕದ್ದಲ್ಲ ಎಂಬುದಕ್ಕೆ ಕಾರಣ ತೋರಿಸಲು ಸ್ವತಂತ್ರನಾಗಿರತಕ್ಕದ್ದು.

ಹಾಗೆ ಕಾರಣವನ್ನು ತೋರಿಸಿದ ಮೇಲೆ ನ್ಯಾಯಾಲಯವು, ಆ ಡಿಕ್ರಿಯನ್ನು ನಿರುಪಾಧಿಕವಾಗಿ ಮಾಡುವ ಮೂಲಕ ಅಥವಾ ಷರತ್ತು ಪೂರ್ವಕ ಡಿಕ್ರಿಯನ್ನು ವಿಪರ್ಯಾಯಗೊಳಿಸುವ ಮೂಲಕ ಅಥವಾ ಇನ್ನೂ ಹೆಚ್ಚಿನ ವಿಚಾರಣೆಯನ್ನು ಅಗತ್ಯಪಡಿಸುವ ಮೂಲಕ ಅಥವಾ ನ್ಯಾಯವು ಅನ್ಯಥಾ ಅಗತ್ಯಪಡಿಸಬಹುದಾದಂತೆ ಆ ಪ್ರಕರಣದೊಂದಿಗೆ ವ್ಯವಹರಿಸತಕ್ಕದ್ದು.

ಉಚ್ಚ ನ್ಯಾಯಾಲಯವು, ನ್ಯಾಯವಾದಿಯ ಮತ್ತು ಸಾಕ್ಷಿದಾರರ ಮತ್ತು ಅಂಥ ಕಾರಣ ತೋರಿಸುವುದರಿಂದ ಅನ್ಯಥಾ ಉದ್ಭವಿಸುವ ಖರ್ಚುಗಳನ್ನು, ಪಕ್ಷಕಾರರು ಅಥವಾ ಹೆಂಡತಿಯನ್ನೂ ಒಳಗೊಂಡು ಅವಳು ಪ್ರತ್ಯೇಕ ಸ್ವತ್ತನ್ನು ಹೊಂದಿದ್ದರೆ ಅದು ಸೂಕ್ತವೆಂದು ಯೋಚಿಸುವಂಥ ಅವರ ಪೈಕಿ ಒಬ್ಬರು ಅಥವಾ ಹೆಚ್ಚು ಮಂದಿ ಸಂದಾಯ ಮಾಡಬೇಕೆಂದು ಆದೇಶಿಸಬಹುದು.

ಷರತ್ತು ಪೂರ್ವಕ ಡಿಕ್ರಿಯನ್ನು ಮಾಡಿರುವಾಗಲೆಲ್ಲ ಮತ್ತು ಅರ್ಜಿದಾರನು ಅಂಥ ಡಿಕ್ರಿಯನ್ನು ನಿರುಪಾಧಿಕವಾಗಿ ಮಾಡಿಸಿಕೊಳ್ಳಲು ಯುಕ್ತಕಾಲದೊಳಗೆ ಕೋರಲು ತಪ್ಪಿದರೆ, ಉಚ್ಚ ನ್ಯಾಯಾಲಯವು, ಆ ದಾವೆಯನ್ನು ವಜಾ ಮಾಡಬಹುದು.

**17. ಕೆಲವು ದಾವೆಗಳನ್ನು ತೆಗೆದುಹಾಕುವುದಕ್ಕೆ ನ್ಯಾಯಾಲಯದ ಅಧಿಕಾರ.–** ಜಿಲ್ಲಾ ನ್ಯಾಯಾಧೀಶನ, ನ್ಯಾಯಾಲಯದಲ್ಲಿ ದಾವೆಯು ಮುಂದುವರಿಯುತ್ತಿರುವ ಅವಧಿಯಲ್ಲಿ ವಿಚ್ಛೇದನವನ್ನು ಪಡೆದುಕೊಳ್ಳುವ ಉದ್ದೇಶಕ್ಕಾಗಿ ಆ ದಾವೆಯ ಯಾರೇ ಪಕ್ಷಕಾರರು ಶಾಮೀಲಾಗಿದ್ದರೆ ಅಥವಾ ಶಾಮೀಲಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಶಂಕಿಸುವ ಯಾರೇ ವ್ಯಕ್ತಿಯು, ಉಚ್ಚ ನ್ಯಾಯಾಲಯ ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸುವಂಥ ರೀತಿಯಲ್ಲಿ, 8ನೇ ಪ್ರಕರಣದ ಮೇರೆಗೆ ಆ ದಾವೆಯನ್ನು ತೆಗೆದುಹಾಕಲು ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಮಾಡಿಕೊಳ್ಳಲು ಸ್ವತಂತ್ರನಾಗಿರತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು ಆ ತರುವಾಯ ಅದು ಸೂಕ್ತವೆಂದು ಯೋಚಿಸಿದರೆ ಅಂಥ ದಾವೆಯನ್ನು ತೆಗೆದು ಹಾಕಬಹುದು ಮತ್ತು ಮೂಲ ಅಧಿಕಾರವ್ಯಾಪ್ತಿಯ ನ್ಯಾಯಾಲಯದಂತೆ ಅದನ್ನು ಅಧಿವಿಚಾರಣೆ ಮಾಡತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು ಮತ್ತು 16ನೇ ಪ್ರಕರಣದಲ್ಲಿ ಅಡಕವಾಗಿರುವ ಉಪಬಂಧಗಳು ಹಾಗೆ ತೆಗೆದುಹಾಕಲಾದ ಪ್ರತಿಯೊಂದು ದಾವೆಗೆ ಅನ್ವಯವಾಗತಕ್ಕದ್ದು; ಅಥವಾ ಜಿಲ್ಲಾ ನ್ಯಾಯಾಧೀಶನಿಗೆ ಆ ಪ್ರಕರಣದ ನ್ಯಾಯಕ್ಕನುಸಾರವಾಗಿ ಡಿಕ್ರಿಯನ್ನು ಮಾಡಲು ಅವನನ್ನು ಶಕ್ತಗೊಳಿಸಲು ಅವಶ್ಯವಾಗಬಹುದಾದಂತೆ ಆಪಾದಿಸಿದ ಶಾಮೀಲಿಗೆ ಸಂಬಂಧಪಟ್ಟಂತೆ ಅಂಥ ಕ್ರಮಗಳನ್ನು ತೆಗೆದುಕೊಳ್ಳಲು ನಿರ್ದೇಶಿಸಬಹುದು.

**17ಎ. [ಬಿಟ್ಟುಬಿಡಲಾಗಿದೆ.]**

## IV.– ವಿವಾಹದ ಅನೂರ್ಜಿತ

**18. ಅನೂರ್ಜಿತದ ಡಿಕ್ರಿಗಾಗಿ ಅರ್ಜಿ.–** ಯಾರೇ ಗಂಡ ಅಥವಾ ಯಾರೇ ಹೆಂಡತಿಯು ಅವನ ಅಥವಾ ಅವಳ ವಿವಾಹವನ್ನು ಅನೂರ್ಜಿತ ಮತ್ತು ಶೂನ್ಯವೆಂದು ಘೋಷಿಸಬೇಕೆಂದು ಪ್ರಾರ್ಥಿಸಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

**19. ಡಿಕ್ರಿಯ ಆಧಾರಗಳು.–** ಅಂಥ ಡಿಕ್ರಿಯನ್ನು,–

(1) ಪ್ರತ್ಯರ್ಜಿದಾರನು/ಳು ವಿವಾಹದ ಕಾಲದಲ್ಲಿ ಮತ್ತು ದಾವೆಯನ್ನು ಹೂಡಿದ ಕಾಲದಲ್ಲಿ ಪ್ರತಿವಾದಿಯು ಷಂಡನಾಗಿದ್ದ/ಳಾಗಿದ್ದ;

(2) ಪಕ್ಷಕಾರನು ರಕ್ತ ಸಂಬಂಧದ (ಸ್ವಾಭಾವಿಕವಾಗಿಯಾಗಲಿ ಅಥವಾ ಕಾನೂನುಸಮ್ಮತವಾಗಿಯಾಗಲಿ) ಅಥವಾ ವಿವಾಹ ಸಂಬಂಧದ ನಿಷೇಧಿತ ಶ್ರೇಣಿಗಳೊಳಗೆ ಇದ್ದಾರೆ;

(3) ಯಾರೇ ಪಕ್ಷಕಾರನು ವಿವಾಹದ ಕಾಲದಲ್ಲಿ ಮನೋವಿಕಲ ಅಥವಾ ಹುಟ್ಟು ದಡ್ಡವನಾಗಿದ್ದನು/ಳಾಗಿದ್ದಳು;

(4) ವಿವಾಹದ ಕಾಲದಲ್ಲಿ ಯಾರೇ ಪಕ್ಷಕಾರನ, ಹಿಂದಿನ ಗಂಡ ಅಥವಾ ಹೆಂಡತಿಯು ಜೀವಿಸಿದ್ದನು/ಜೀವಿಸಿದ್ದಳು ಮತ್ತು ಹಿಂದಿನ ಗಂಡ ಅಥವಾ ಹೆಂಡತಿಯೊಂದಿಗೆ ವಿವಾಹವು ಜಾರಿಯಲ್ಲಿತ್ತು

– ಎಂಬ ಯಾವುದೇ ಆಧಾರದ ಮೇಲೆ ಮಾಡಬಹುದು.

ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವುದೇ ಪಕ್ಷಕಾರನ/ಳ ಸಮ್ಮತಿಯನ್ನು ಬಲಾತ್ಕಾರವಾಗಿ ಅಥವಾ ಮೋಸದಿಂದ ಪಡೆಯಲಾಗಿತ್ತು ಎಂಬ ಕಾರಣದ ಮೇಲೆ ವಿವಾಹದ ಅನೂರ್ಜಿತದ ಡಿಕ್ರಿಗಳನ್ನು ಮಾಡಲು ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**20. [ಬಿಟ್ಟುಬಿಡಲಾಗಿದೆ.]**

**21. ಅನೂರ್ಜಿತ ವಿವಾಹದ ಮಕ್ಕಳು.–** ಹಿಂದಿನ ಗಂಡ ಅಥವಾ ಹೆಂಡತಿಯು ಜೀವಿಸಿದ್ದನು/ಳು ಎಂಬ ಕಾರಣದ ಮೇಲೆ ವಿವಾಹವನ್ನು ಶೂನ್ಯಗೊಳಿಸಿರುವಲ್ಲಿ ಮತ್ತು ತರುವಾಯದ ವಿವಾಹವನ್ನು ಸದ್ಭಾವನೆಯಿಂದ ಮತ್ತು ಪಕ್ಷಕಾರರು ಹಿಂದಿನ ಗಂಡ ಅಥವಾ ಹೆಂಡತಿ ಮರಣ ಹೊಂದಿದ್ದನು/ಳು ಎಂಬ ಬಗ್ಗೆ ಪೂರ್ಣ ನಂಬಿಕೆಯೊಂದಿಗೆ ಮಾಡಿಕೊಳ್ಳಲಾಯಿತು ಎಂದು ತೀರ್ಮಾನಿಸಿದರೆ ಅಥವಾ ವಿವಾಹವನ್ನು ಮನೋವಿಕಲತೆಯ ಕಾರಣದ ಮೇಲೆ ಶೂನ್ಯಗೊಳಿಸಿದಾಗ, ಡಿಕ್ರಿಯನ್ನು ಮಾಡುವುದಕ್ಕೆ ಮುಂಚೆ ಹುಟ್ಟಿರುವ ಮಕ್ಕಳನ್ನು ಡಿಕ್ರಿಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅವರು ಔರಸ ಮಕ್ಕಳಂತೆ ಅದೇ ರೀತಿಯಲ್ಲಿ, ವಿವಾಹ ಕಾಲದಲ್ಲಿ ಕರಾರು ಮಾಡಿಕೊಳ್ಳಲು ಸಕ್ಷಮನಾಗಿದ್ದ/ಳಾಗಿದ್ದ ತಂದೆ/ತಾಯಿಯ ಸಂಪದದ ಉತ್ತರಾಧಿಕಾರಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

## V.- ನ್ಯಾಯಿಕ ಪ್ರತ್ಯೇಕೀಕರಣ

**22. ಸಹವಾಸ ವಿಚ್ಛೇದನದ ಸಂಬಂಧದ ಕಾರಣಕ್ಕಾಗಿ ವಿಚ್ಛೇದನದ ಡಿಕ್ರಿಗೆ ನಿಷೇಧ; ಆದರೆ ನ್ಯಾಯಿಕ ಪ್ರತ್ಯೇಕತೆಯನ್ನು ಗಂಡ ಅಥವಾ ಹೆಂಡತಿ ಪಡೆಯಬಹುದು.–** ಸಹವಾಸ ವಿಚ್ಛೇದನದ ಕಾರಣಕ್ಕಾಗಿನ ವಿವಾಹ ವಿಚ್ಛೇದನಕ್ಕಾಗಿ ಇನ್ನು ಮುಂದೆ ಯಾವುದೇ ಡಿಕ್ರಿಯನ್ನು ಮಾಡತಕ್ಕದ್ದಲ್ಲ; ಆದರೆ ಗಂಡ ಅಥವಾ ಹೆಂಡತಿಯು ಪರಸತಿಸಂಗ/ಪರ ಪುರುಷಸಂಗ ಅಥವಾ ಕ್ರೌರ್ಯ ಅಥವಾ ಪರಿತ್ಯಾಗದ

ಕಾರಣದ ಮೇಲೆ ಎರಡು ವರ್ಷಗಳು ಅಥವಾ ಅದಕ್ಕೂ ಮೇಲ್ಪಟ್ಟ ಅವಧಿಯವರೆಗೆ ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಯನ್ನು ಪಡೆಯಬಹುದು ಮತ್ತು ಅಂಥ ಡಿಕ್ರಿಯು ಅಸ್ತಿತ್ವದಲ್ಲಿರುವ ಕಾನೂನಿನ ಮೇರೆಗೆ, ಸಹವಾಸ ವಿಚ್ಛೇದನದ ವಿವಾಹ ವಿಚ್ಛೇದನದ ಪರಿಣಾಮವನ್ನು ಮತ್ತು ಇಲ್ಲಿ ಇನ್ನು ಮುಂದೆ ನಮೂದಿಸಿದಂಥ ಇತರ ಕಾನೂನಿನ ಪರಿಣಾಮವನ್ನು ಹೊಂದಿರತಕ್ಕದ್ದು.

**23. ಪ್ರತ್ಯೇಕತೆಗಾಗಿ ಮನವಿಯನ್ನು ಅರ್ಜಿಯ ಮೂಲಕ ಮಾಡಿಕೊಳ್ಳುವುದು.–** ಹಿಂದೆ ಹೇಳಿದ ಯಾವುದೇ ಒಂದು ಕಾರಣದ ಮೇಲೆ ನ್ಯಾಯಿಕ ಪ್ರತ್ಯೇಕತೆಗಾಗಿ ಮನವಿಯನ್ನು ಗಂಡ ಅಥವಾ ಹೆಂಡತಿಯು ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯ ಮೂಲಕ ಮಾಡಬಹುದು; ಮತ್ತು ಆ ನ್ಯಾಯಾಲಯವು ಅಂಥ ಅರ್ಜಿಯಲ್ಲಿ ಮಾಡಿಕೊಂಡ ಹೇಳಿಕೆಗಳ ಸತ್ಯದ ಬಗ್ಗೆ ಮತ್ತು ಆ ಮನವಿಯನ್ನು ಏಕೆ ಮಂಜೂರು ಮಾಡಬಾರದೆಂಬ ಬಗ್ಗೆ ಯಾವುದೇ ಕಾನೂನುಸಮ್ಮತ ಆಧಾರವಿಲ್ಲ ಎಂಬ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಅದಕ್ಕನುಸಾರವಾಗಿ ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಯನ್ನು ಮಾಡಬಹುದು.

**24. ತರುವಾಯ ಆರ್ಜಿಸಿದ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತ್ಯೇಕಗೊಂಡ ಹೆಂಡತಿಯನ್ನು ಅವಿವಾಹಿತೆ ಎಂದು ಭಾವಿಸತಕ್ಕದ್ದು.–** ಈ ಅಧಿನಿಯಮದ ಮೇರೆಗಿನ ನ್ಯಾಯಿಕ ಪ್ರತ್ಯೇಕತೆಯ ಪ್ರತಿಯೊಂದು ಸಂದರ್ಭದಲ್ಲಿ ತೀರ್ಪಿನ ದಿನಾಂಕದಿಂದ ಮತ್ತು ಪ್ರತ್ಯೇಕತೆಯು ಮುಂದುವರಿಯುತ್ತಿರುವಾಗ, ಆ ಹೆಂಡತಿಯನ್ನು, ಅವಳು ಆರ್ಜಿಸಬಹುದಾದಂಥ ಅಥವಾ ಅವಳಿಗೆ ಬರಬಹುದಾದಂಥ ಅಥವಾ ಅವಳಿಗೆ ಪ್ರಾಪ್ತವಾಗಬಹುದಾದಂಥ ಪ್ರತಿಯೊಂದು ವಿವರಣೆಯ ಸ್ವತ್ತಿಗೆ ಸಂಬಂಧಿಸಿದಂತೆ ಅವಿವಾಹಿತೆ ಎಂದು ಪರಿಗಣಿಸತಕ್ಕದ್ದು.

ಅಂಥ ಸ್ವತ್ತನ್ನು ಅವಳು ಎಲ್ಲಾ ವಿಧದಲ್ಲಿಯೂ ಅವಿವಾಹಿತ ಮಹಿಳೆಯಂತೆ ವಿಲೆ ಮಾಡಬಹುದು ಮತ್ತು ಅವಳು ಮರಣ ಹೊಂದಿದ ಮೇಲೆ, ಅದು ಅವಳು ಮರಣಶಾಸನ ರಹಿತೆಯಾಗಿ ಮರಣ ಹೊಂದಿದ ಸಂದರ್ಭದಲ್ಲಿ, ಅವಳ ಗಂಡನು ಆಗ ಮರಣ ಹೊಂದಿದ್ದರೆ ಹೇಗೆ ಹೋಗುತ್ತಿತ್ತೋ ಹಾಗೆ ಹೋಗತಕ್ಕದ್ದು:

ಪರಂತು, ಅಂಥ ಯಾರೇ ಹೆಂಡತಿಯು ಅವಳ ಗಂಡನೊಂದಿಗೆ ಪುನಃ ಸಹವಾಸ ಮಾಡಿದರೆ, ಅಂಥ ಸಹವಾಸವು ನಡೆದಾಗ, ಅವಳು ಹಕ್ಕುಳ್ಳವಳಾಗಿರಬಹುದಾಗಿದ್ದಂಥ ಎಲ್ಲಾ ಸ್ವತ್ತನ್ನು ಅವಳ ಪ್ರತ್ಯೇಕ ಉಪಯೋಗಕ್ಕಾಗಿ ಧಾರಣ ಮಾಡತಕ್ಕದ್ದು; ಆದಾಗ್ಯೂ ಇದು, ಪ್ರತ್ಯೇಕವಾಗುವಾಗ ಅವಳು ಮತ್ತು ಗಂಡನ ನಡುವೆ ಬರಹದಲ್ಲಿ ಮಾಡಿಕೊಂಡ ಯಾವುದೇ ಒಪ್ಪಂದಕ್ಕೆ ಒಳಪಟ್ಟಿರತಕ್ಕದ್ದು.

**25. ಕರಾರು ಮತ್ತು ದಾವೆ ಹೂಡುವ ಉದ್ದೇಶಗಳಿಗಾಗಿ ಪ್ರತ್ಯೇಕಗೊಂಡ ಹೆಂಡತಿಯನ್ನು ಅವಿವಾಹಿತೆಯೆಂದು ಭಾವಿಸತಕ್ಕದ್ದು.–** ಈ ಅಧಿನಿಯಮದ ಮೇರೆಗಿನ ನ್ಯಾಯಿಕ ಪ್ರತ್ಯೇಕತೆಯ ಪ್ರತಿಯೊಂದು ಸಂದರ್ಭದಲ್ಲಿ ಹೆಂಡತಿಯು ಹಾಗೆ ಪ್ರತ್ಯೇಕಗೊಂಡಿರುವಾಗ, ಕರಾರಿನ ಮತ್ತು ಅಪಕೃತ್ಯಗಳ ಮತ್ತು ಕ್ಷತಿಗಳ ಮತ್ತು ಯಾವುದೇ ಸಿವಿಲ್ ವ್ಯವಹರಣೆಯಲ್ಲಿ ದಾವೆ ಹೂಡುವ ಮತ್ತು ದಾವೆಗೆ ಗುರಿಯಾಗುವ ಉದ್ದೇಶಗಳಿಗಾಗಿ ಅವಳನ್ನು ಅವಿವಾಹಿತ ಮಹಿಳೆಯೆಂದು ಪರಿಗಣಿಸತಕ್ಕದ್ದು ಮತ್ತು ಪ್ರತ್ಯೇಕತೆಯ ಅವಧಿಯಲ್ಲಿ ಅವಳು ಮಾಡಿಕೊಂಡ ಯಾವುದೇ ಕರಾರು ಮಾಡಿದ ಅಥವಾ ಮಾಡದೇ ಬಿಟ್ಟ ಯಾವುದೇ ಕಾರ್ಯ ಅಥವಾ ವಹಿಸಿದ ಯಾವುದೇ ಖರ್ಚುಗಳಿಗೆ ಸಂಬಂಧಪಟ್ಟಂತೆ ಅವಳ ಗಂಡನು ಹೊಣೆಗಾರನಾಗಿರತಕ್ಕದ್ದಲ್ಲ:

ಪರಂತು, ಯಾವುದೇ ಅಂಥ ನ್ಯಾಯಿಕ ಪ್ರತ್ಯೇಕತೆಯ ಮೇಲೆ ವಾದಕಾಲೀನ ಜೀವನಾಂಶವನ್ನು ಹೆಂಡತಿಗೆ ಸಂದಾಯ ಮಾಡಲು ಡಿಕ್ರಿ ಅಥವಾ ಆದೇಶ ಮಾಡಲಾಗಿರುವಲ್ಲಿ ಮತ್ತು ಅದನ್ನು ಗಂಡನು ಕ್ರಮಬದ್ಧವಾಗಿ ಸಂದಾಯ ಮಾಡದಿರುವಲ್ಲಿ ಅವಳ ಉಪಯೋಗಕ್ಕಾಗಿ ಸರಬರಾಜು ಮಾಡಿದ ಅವಶ್ಯಕತೆಗಳಿಗಾಗಿ ಅವನು ಹೊಣೆಗಾರನಾಗಿರತಕ್ಕದ್ದು:

ಮತ್ತೂ ಪರಂತು, ಅವಳಿಗೆ ಮತ್ತು ಅವಳ ಗಂಡನಿಗೆ ಕೊಟ್ಟಿರುವ ಯಾವುದೇ ಜಂಟಿ ಅಧಿಕಾರವನ್ನು ಚಲಾಯಿಸಿ, ಅಂಥ ಪ್ರತ್ಯೇಕತೆಯ ಅವಧಿಯ ಯಾವುದೇ ಕಾಲದಲ್ಲಿ, ಸೇರಿಕೊಳ್ಳುವುದರಿಂದ ಹೆಂಡತಿಯನ್ನು ಯಾವುದೂ ಪ್ರತಿಬಂಧಿಸತಕ್ಕದ್ದಲ್ಲ.

## ಪ್ರತ್ಯೇಕತೆಯ ಡಿಕ್ರಿಯ ವಿಪರ್ಯಯ

**26. ಗಂಡನ ಅಥವಾ ಹೆಂಡತಿಯ ಗೈರುಹಾಜರಿಯ ಅವಧಿಯಲ್ಲಿ ಪಡೆದುಕೊಂಡ ಪ್ರತ್ಯೇಕತೆಯ ಡಿಕ್ರಿಯನ್ನು ವಿಪರ್ಯಯಗೊಳಿಸಬಹುದು.–** ಸಂದರ್ಭಾನುಸಾರ, ಯಾರ ಹೆಂಡತಿ ಅಥವಾ ಗಂಡನ ಅರ್ಜಿಯ ಮೇಲೆ ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಯನ್ನು ಉಚ್ಚರಿಸಲಾಗಿದೆಯೋ, ಆ ಯಾರೇ ಗಂಡ ಅಥವಾ ಹೆಂಡತಿಯು, ಆ ತರುವಾಯ ಯಾವುದೇ ಕಾಲದಲ್ಲಿ, ಆ ಡಿಕ್ರಿಯನ್ನು ಉಚ್ಚರಿಸುವಂಥ ನ್ಯಾಯಾಲಯಕ್ಕೆ, ಅದನ್ನು ಅವನ ಅಥವಾ ಅವಳ ಗೈರುಹಾಜರಿಯಲ್ಲಿ ಪಡೆದುಕೊಳ್ಳಲಾಗಿದ್ದು ಮತ್ತು ಪರಿತ್ಯಾಗವು ಅಂಥ ಡಿಕ್ರಿಗೆ ಆಧಾರವಾಗಿದ್ದಲ್ಲಿ, ಆರೋಪಿತ ಪರಿತ್ಯಾಗಕ್ಕಾಗಿ ಯುಕ್ತ ಕಾರಣವಿತ್ತು ಎಂಬ ಕಾರಣದ ಮೇಲೆ ಅಂಥ ಡಿಕ್ರಿಯ ವಿಪರ್ಯಾಯಕ್ಕಾಗಿ ಪ್ರಾರ್ಥಿಸಿ ಅರ್ಜಿಯನ್ನು ಸಲ್ಲಿಸಬಹುದು.

ನ್ಯಾಯಾಲಯವು, ಅಂಥ ಅರ್ಜಿಯ ಆಪಾದನೆಗಳ ಸತ್ಯದ ಬಗ್ಗೆ ಮನದಟ್ಟಾದ ಮೇಲೆ, ತದನುಸಾರವಾಗಿ ಆ ಡಿಕ್ರಿಯನ್ನು ವಿಪರ್ಯಯಗೊಳಿಸಬಹುದು; ಆದರೆ ಅಂಥ ವಿಪರ್ಯಾಯವು,

ಅದನ್ನು ಡಿಕ್ರಿ ಮಾಡದಿದ್ದ ಸಂದರ್ಭದಲ್ಲಿ ಪ್ರತ್ಯೇಕತೆಯ ಆದೇಶದ ಮತ್ತು ಅದರ ವಿಪರ್ಯಾಯದ ಕಾಲಗಳ ನಡುವೆ ವಹಿಸಿದ, ಮಾಡಿಕೊಂಡ ಅಥವಾ ಮಾಡಿದ ಹೆಂಡತಿಯ ಯಾವುದೇ ಋಣಗಳು, ಕರಾರುಗಳು ಅಥವಾ ಕಾರ್ಯಗಳಿಗೆ ಸಂಬಂಧಿಸಿದಂತೆ ಯಾರೇ ಇತರ ವ್ಯಕ್ತಿಯು ಹೊಂದಿದ್ದಿರಬಹುದಾದಂಥ ಹಕ್ಕುಗಳು ಅಥವಾ ಪರಿಹಾರಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಅಥವಾ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

## VI.- ಸಂರಕ್ಷಣಾ ಆದೇಶಗಳು

**27. ಪರಿತ್ಯಾಗ ಮಾಡಿದ ಹೆಂಡತಿಯು ಸಂರಕ್ಷಣೆಗಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.–** ಭಾರತ ಉತ್ತರಾಧಿಕಾರ ಅಧಿನಿಯಮ, 1865 (1865ರ 10)ರ 4ನೇ ಪ್ರಕರಣವು ಯಾರಿಗೆ ಅನ್ವಯವಾಗುವುದಿಲ್ಲವೋ ಆ ಯಾರೇ ಹೆಂಡತಿಯು, ಅವಳ ಗಂಡನು ಪರಿತ್ಯಾಗ ಮಾಡಿದಾಗ, ಅಂಥ ಪರಿತ್ಯಾಗದ ತರುವಾಯ ಯಾವುದೇ ಕಾಲದಲ್ಲಿ ಅವಳು ಆರ್ಜಿಸಿರಬಹುದಾದ ಅಥವಾ ಆರ್ಜಿಸಬಹುದಾದ ಯಾವುದೇ ಸ್ವತ್ತು ಮತ್ತು ಅವಳು ಸ್ವಾಧೀನಪಡೆದಿರಬಹುದಾದಂಥ ಅಥವಾ ಸ್ವಾಧೀನಪಡೆಯಬಹುದಾದಂಥ ಯಾವುದೇ ಸ್ವತ್ತನ್ನು, ಅವಳ ಗಂಡ ಅಥವಾ ಅವನ ಸಾಲಗಾರರು ಅಥವಾ ಅವನ ಅಡಿಯಲ್ಲಿ ಕ್ಲೇಮು ಮಾಡುವ ಯಾರೇ ವ್ಯಕ್ತಿಯ ವಿರುದ್ಧ ಸಂರಕ್ಷಿಸುವ ಆದೇಶಕ್ಕಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

**28. ನ್ಯಾಯಾಲಯವು ಸಂರಕ್ಷಣಾ ಆದೇಶವನ್ನು ಮಂಜೂರು ಮಾಡಬಹುದು.–** ನ್ಯಾಯಾಲಯಕ್ಕೆ, ಅಂಥ ಪರಿತ್ಯಾಗದ ಸಂಗತಿಯ ಬಗ್ಗೆ ಮತ್ತು ಅದು ಯುಕ್ತ ಕಾರಣವಿಲ್ಲದೆ ಆಗಿದೆ ಎಂದು ಮತ್ತು ಹೆಂಡತಿಯು ಅವಳ ಸ್ವಂತ ಶ್ರಮ ಅಥವಾ ಸ್ವತ್ತಿನಿಂದ ಅವಳೇ ಜೀವನ ನಿರ್ವಹಣೆ ಮಾಡುತ್ತಿದ್ದಾಳೆ ಎಂದು ಮನದಟ್ಟಾದರೆ, ಅವಳ ಗಂಡ ಮತ್ತು ಎಲ್ಲಾ ಸಾಲಗಾರರು ಮತ್ತು ಅವನ ಅಡಿಯಲ್ಲಿ ಕ್ಲೇಮು ಮಾಡುವ ವ್ಯಕ್ತಿಗಳಿಂದ ಅವಳ ಗಳಿಕೆಗಳು ಮತ್ತು ಇತರ ಸ್ವತ್ತನ್ನು ಸಂರಕ್ಷಿಸುವ ಆದೇಶವನ್ನು ಮಾಡಬಹುದು. ಅಂಥ ಪ್ರತಿಯೊಂದು ಆದೇಶವು ಆ ಪರಿತ್ಯಾಗವು ಪ್ರಾರಂಭವಾದಂಥ ಕಾಲವನ್ನು ನಿರೂಪಿಸತಕ್ಕದ್ದು ಮತ್ತು ಅದರ ಮೇಲೆ ಆಧರಿಸಿ ಹೆಂಡತಿಯೊಂದಿಗೆ ವ್ಯವಹರಿಸುವ ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅಂಥ ಕಾಲದ ಬಗ್ಗೆ ಅದು ನಿರ್ಣಾಯಕವಾಗಿರತಕ್ಕದ್ದು.

**29. ಆದೇಶಗಳ ರದ್ದಿಯಾತಿ ಅಥವಾ ಬದಲಾವಣೆ.–** ಗಂಡ ಅಥವಾ ಅವನ ಯಾರೇ ಸಾಲಗಾರ ಅಥವಾ ಅವನ ಅಡಿಯಲ್ಲಿ ಕ್ಲೇಮು ಮಾಡುವ ವ್ಯಕ್ತಿಯು, ಅಂಥ ಆದೇಶವನ್ನು ಮಾಡಿದಂಥ ನ್ಯಾಯಾಲಯಕ್ಕೆ ಅದನ್ನು ರದ್ದುಪಡಿಸುವುದಕ್ಕಾಗಿ ಅಥವಾ ಬದಲಾಯಿಸುವುದಕ್ಕಾಗಿ ಅರ್ಜಿ ಸಲ್ಲಿಸಬಹುದು

ಮತ್ತು ಆ ನ್ಯಾಯಾಲಯವು ಆ ಪರಿತ್ಯಾಗವು ನಿಂತು ಹೋಗಿದ್ದರೆ ಅಥವಾ ಹಾಗೆ ಮಾಡುವುದು ಯಾವುದೇ ಇತರ ಕಾರಣಕ್ಕಾಗಿ ಸೂಕ್ತವೆಂದು ಯೋಚಿಸಿದರೆ ತದನುಸಾರವಾಗಿ ಆ ಆದೇಶವನ್ನು ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು.

**30. ಆದೇಶದ ನೋಟೀಸನ್ನು ಪಡೆದ ತರುವಾಯ ಹೆಂಡತಿಯ ಸ್ವತ್ತನ್ನು ಅಭಿಗ್ರಹಿಸುವ ಗಂಡನ ಹೊಣೆಗಾರಿಕೆ.–** ಗಂಡ ಅಥವಾ ಅವನ ಯಾರೇ ಸಾಲಗಾರ ಅಥವಾ ಅವನ ಅಡಿಯಲ್ಲಿ ಕ್ಲೇಮು ಮಾಡುವ ವ್ಯಕ್ತಿಯು, ಯಾವುದೇ ಅಂಥ ಆದೇಶದ ನೋಟೀಸನ್ನು ಪಡೆದ ತರುವಾಯ ಹೆಂಡತಿಯ ಯಾವುದೇ ಸ್ವತ್ತನ್ನು ಅಭಿಗ್ರಹಿಸಿದರೆ ಅಥವಾ ಧಾರಣ ಮಾಡುವುದನ್ನು ಮುಂದುವರೆಸಿದರೆ, ಹೆಂಡತಿಯ ದಾವೆಯಲ್ಲಿ (ಅದನ್ನು ಹೂಡಲು ಅವಳನ್ನು ಈ ಮೂಲಕ ಶಕ್ತಗೊಳಿಸಲಾಗಿದ್ದರೆ) ಆ ನಿರ್ದಿಷ್ಟ ಸ್ವತ್ತನ್ನು ಅವಳಿಗೆ ಹಿಂದಿರುಗಿಸಲು ಅಥವಾ ವಶಾವಣೆ ಮಾಡಲು ಮತ್ತು ಅದರ ಮೌಲ್ಯದ ಎರಡರಷ್ಟಕ್ಕೆ ಸಮನಾದ ಮೊತ್ತವನ್ನು ಅವಳಿಗೆ ಸಂದಾಯ ಮಾಡಲು ಸಹ ಹೊಣೆಗಾರನಾಗಿರತಕ್ಕದ್ದು.

**31. ಆದೇಶದ ಮುಂದುವರಿಕೆಯ ಅವಧಿಯಲ್ಲಿ ಹೆಂಡತಿಯ ಕಾನೂನುಸಮ್ಮತ ಸ್ಥಾನ.–** ಯಾವುದೇ ಅಂಥ ಸಂರಕ್ಷಣಾ ಆದೇಶವು ಜಾರಿಯಲ್ಲಿರುವವರೆಗೆ, ಹೆಂಡತಿಯು ಅವಳ ಅಂಥ ಪರಿತ್ಯಾಗದ ಅವಧಿಯಲ್ಲಿ, ಸ್ವತ್ತು ಮತ್ತು ಕರಾರುಗಳು ಮತ್ತು ದಾವೆ ಹೂಡುವುದು ಮತ್ತು ದಾವೆಗೆ ಗುರಿಯಾಗುವುದು ಇವುಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿಧದಲ್ಲಿಯೂ, ಈ ಅಧಿನಿಯಮದ ಮೇರೆಗೆ ಅವಳು ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಯನ್ನು ಪಡೆದುಕೊಂಡಿದ್ದರೆ ಯಾವ ಸ್ಥಾನದಲ್ಲಿರುತ್ತಿದ್ದಳೋ ಅದೇ ಸ್ಥಾನದಲ್ಲಿ ಇರತಕ್ಕದ್ದು ಮತ್ತು ಇರುವಳೆಂಬುದಾಗಿ ಭಾವಿಸತಕ್ಕದ್ದು.

## VII.- ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿ

**32. ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಅರ್ಜಿ.–** ಗಂಡನಾಗಲಿ ಅಥವಾ ಹೆಂಡತಿಯಾಗಲಿ ಯುಕ್ತ ಕಾರಣವಿಲ್ಲದೆ, ಒಬ್ಬರ ಸಂಗದಿಂದ ಹಿಂತೆಗೆದುಕೊಂಡಾಗ, ಹೆಂಡತಿಯಾಗಲಿ ಅಥವಾ ಗಂಡನಾಗಲಿ ದಾಂಪತ್ಯ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯ ಮೂಲಕ ಮನವಿ ಮಾಡಿಕೊಳ್ಳಬಹುದು ಮತ್ತು ಆ ನ್ಯಾಯಾಲಯವು ಅಂಥ ಅರ್ಜಿಯಲ್ಲಿ ಮಾಡಿಕೊಂಡ ಹೇಳಿಕೆಗಳ ಸತ್ಯದ ಬಗ್ಗೆ ಮತ್ತು ಆ ಅರ್ಜಿಯನ್ನು ಏಕೆ ಮಂಜೂರು ಮಾಡಬಾರದು ಎಂಬುದಕ್ಕೆ ಯಾವುದೇ ಕಾನೂನುಸಮ್ಮತ ಕಾರಣದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ತದನುಸಾರವಾಗಿ ದಾಂಪತ್ಯ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿ ಡಿಕ್ರಿಯನ್ನು ಮಾಡಬಹುದು.

**33. ಅರ್ಜಿಗೆ ಉತ್ತರ.–** ದಾಂಪತ್ಯ ಹಕ್ಕುಗಳ ಪೂರ್ವಸ್ಥಿತಿ ಪ್ರಾಪ್ತಿಗಾಗಿನ ಅರ್ಜಿಗೆ ಉತ್ತರವಾಗಿ, ನ್ಯಾಯಿಕ ಪ್ರತ್ಯೇಕತೆಗಾಗಿನ ಅಥವಾ ವಿವಾಹದ ಅನೂರ್ಜಿತದ ಡಿಕ್ರಿಗಾಗಿನ ದಾವೆಗೆ ಆಧಾರವಾಗದಂಥ ಯಾವುದನ್ನಾದರೂ ವಾದಿಸತಕ್ಕದ್ದಲ್ಲ.

## VIII.- ಹಾನಿ ಪರಿಹಾರ ಮತ್ತು ಖರ್ಚುಗಳು

**34. [ಬಿಟ್ಟುಬಿಡಲಾಗಿದೆ.]**

**35. [ಬಿಟ್ಟುಬಿಡಲಾಗಿದೆ.]**

## IX.- ವಾದಕಾಲೀನ ಜೀವನಾಂಶ

**36. ವಾದಕಾಲೀನ ಜೀವನಾಂಶ.–** ಈ ಅಧಿನಿಯಮದ ಮೇರೆಗಿನ ಯಾವುದೇ ದಾವೆಯಲ್ಲಿ ಅದನ್ನು ಗಂಡನೇ ಆಗಲಿ ಅಥವಾ ಹೆಂಡತಿಯೇ ಆಗಲಿ ಹೂಡಿರಲಿ ಮತ್ತು ಅವಳು ಸಂರಕ್ಷಣಾ ಆದೇಶವನ್ನು ಪಡೆದಿರಲಿ ಅಥವಾ ಇಲ್ಲದೇ ಇರಲಿ ಆ ಹೆಂಡತಿಯು, ದಾವೆಯು ಇತ್ಯರ್ಥದಲ್ಲಿರುವಾಗ ವಾದಕಾಲೀನ ಜೀವನಾಂಶಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು.

ಅಂಥ ಅರ್ಜಿಯನ್ನು ಗಂಡನ ಮೇಲೆ ಜಾರಿ ಮಾಡತಕ್ಕದ್ದು ಮತ್ತು ಅದರಲ್ಲಿ ಒಳಗೊಂಡ ಹೇಳಿಕೆಗಳ ಸತ್ಯದ ಬಗ್ಗೆ ಮನದಟ್ಟಾದ ಮೇಲೆ ನ್ಯಾಯಾಲಯವು, ಅದು ನ್ಯಾಯವೆಂದು ಭಾವಿಸಬಹುದಾದಂತೆ, ದಾವೆಯು ಇತ್ಯರ್ಥದಲ್ಲಿರುವಾಗ ವಾದಕಾಲೀನ ಜೀವನಾಂಶವನ್ನು ಆ ಹೆಂಡತಿಗೆ ಸಂದಾಯ ಮಾಡುವುದಕ್ಕಾಗಿ ಗಂಡನಿಗೆ ಅಂಥ ಆದೇಶವನ್ನು ಮಾಡಬಹುದು:

ಪರಂತು, ವಾದಕಾಲೀನ ಜೀವನಾಂಶದ ವೆಚ್ಚಗಳ ಇತ್ಯರ್ಥದ ಅರ್ಜಿಯನ್ನು, ಸಾಧ್ಯವಾಗಬಹುದಾದಷ್ಟು ಬೇಗನೆ, ಅಂಥ ಅರ್ಜಿಯನ್ನು ಸಲ್ಲಿಸಿದ ಅರವತ್ತು ದಿನಗಳ ಒಳಗಾಗಿ ವಿಲೆಗೊಳಿಸತಕ್ಕದ್ದು.

**37. ಖಾಯಂ ವಾದಕಾಲೀನ ಜೀವನಾಂಶವನ್ನು ಆದೇಶಿಸಲು ಅಧಿಕಾರ.–** ವಿವಾಹದ ವಿಘಟನೆಯ ಡಿಕ್ರಿಯನ್ನು ಅಥವಾ ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಯನ್ನು ಹೆಂಡತಿಯು ತಡೆದುಕೊಂಡಿದ್ದರೆ, ಜಿಲ್ಲಾ ನ್ಯಾಯಾಲಯವು, ಅಂಥ ಡಿಕ್ರಿಯ ಮೇಲೆ ನ್ಯಾಯಾಲಯಕ್ಕೆ ತೃಪ್ತಿಯಾಗುವಂತೆ ಅವಳ ಸಂಪತ್ತು (ಯಾವುದಾದರೂ ಇದ್ದರೆ) ಅದಕ್ಕೆ, ಗಂಡನ ಸಾಮರ್ಥ್ಯ ಮತ್ತು ಅದು ಸೂಕ್ತವೆಂದು ಯೋಚಿಸುವಂತೆ ಪಕ್ಷಕಾರರ ನಡತೆಗೆ ಗಮನಕೊಟ್ಟು, ಅವಳ ಜೀವಿತದ ಅವಧಿಯನ್ನು ಮೀರದ ಯಾವುದೇ

ಅವಧಿಯವರೆಗೆ ಅಂಥ ಮೊಬಲಗಿನ ಮೊತ್ತ ಅಥವಾ ಅಂಥ ಹಣದ ವಾರ್ಷಿಕ ಮೊತ್ತವನ್ನು ಹೆಂಡತಿಗೆ ಸುನಿಶ್ಚಿತಗೊಳಿಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಎಲ್ಲಾ ಅವಶ್ಯ ಪಕ್ಷಕಾರರು ಸರಿಯಾದ ಲಿಖಿತವನ್ನು ಬರೆದುಕೊಡುವಂತೆ ಮಾಡಬಹುದು.

**ಮಾಸಿಕ ಅಥವಾ ಸಾಪ್ತಾಹಿಕ ಸಂದಾಯಗಳನ್ನು ಆದೇಶಿಸಲು ಅಧಿಕಾರ.–** ಅವಳ ಪ್ರತಿಯೊಂದು ಸಂದರ್ಭದಲ್ಲಿ ನ್ಯಾಯಾಲಯವು, ಯುಕ್ತವೆಂದು ಯೋಚಿಸಬಹುದಾದಂತೆ ಜೀವನಾಂಶ ಮತ್ತು ಜೀವನ ಘೋಷಣೆಗಾಗಿ ಅಂಥ ಮಾಸಿಕ ಅಥವಾ ಸಾಪ್ತಾಹಿಕ ಮೊತ್ತಗಳನ್ನು ಹೆಂಡತಿಗೆ ಸಂದಾಯ ಮಾಡುವುದಕ್ಕಾಗಿ ಗಂಡನಿಗೆ ಆದೇಶವನ್ನು ಮಾಡಬಹುದು:

ಪರಂತು, ಗಂಡನು ಆ ತರುವಾಯ ಯಾವುದೇ ಕಾರಣದಿಂದಾಗಿ ಅಂಥ ಸಂದಾಯಗಳನ್ನು ಮಾಡಲು ಅಶಕ್ತನಾದರೆ, ಆ ಆದೇಶವನ್ನು ರದ್ದುಗೊಳಿಸುವುದು ಅಥವಾ ತಿದ್ದುಪಡಿ ಮಾಡುವುದು ಅಥವಾ ಸಂದಾಯ ಮಾಡಬೇಕೆಂದು ಹಾಗೆ ಆದೇಶಿಸಿದ ಇಡೀ ಹಣ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿ ಅದನ್ನು ತಾತ್ಕಾಲಿಕವಾಗಿ ಅಮಾನತ್ತುಗೊಳಿಸುವುದು ಮತ್ತು ನ್ಯಾಯಾಲಯಕ್ಕೆ ಸೂಕ್ತವೆಂದು ತೋರುವಂತೆ ಅದೇ ಆದೇಶವನ್ನು ಪೂರ್ಣವಾಗಿ ಅಥವಾ ಭಾಗಶಃ ಪುನಃ ಪ್ರಾರಂಭಿಸುವುದು ನ್ಯಾಯಾಲಯಕ್ಕೆ ಕಾನೂನುಸಮ್ಮತವಾಗಿರತಕ್ಕದ್ದು.

**38. ನ್ಯಾಯಾಲಯವು ಹೆಂಡತಿಗೆ ಅಥವಾ ಅವಳ ನ್ಯಾಸಧಾರಿಗೆ ವಾದಕಾಲೀನ ಜೀವನಾಂಶದ ಸಂದಾಯವನ್ನು ನಿರ್ದೇಶಿಸಬಹುದು.–** ನ್ಯಾಯಾಲಯವು ವಾದಕಾಲೀನ ಜೀವನಾಂಶಕ್ಕಾಗಿ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಮಾಡಿದಂಥ ಎಲ್ಲಾ ಸಂದರ್ಭಗಳಲ್ಲಿ, ಅದನ್ನು ಹೆಂಡತಿಗೆ ಆಗಲಿ ಅಥವಾ ನ್ಯಾಯಾಲಯವು ಅನುಮೋದಿಸಬೇಕಾದ ಅವಳ ಪರವಾಗಿ ಯಾರೇ ನ್ಯಾಸಧಾರಿಗೆ ಆಗಲಿ ಸಂದಾಯ ಮಾಡಬೇಕೆಂದು ನಿರ್ದೇಶಿಸಬಹುದು ಮತ್ತು ನ್ಯಾಯಾಲಯಕ್ಕೆ ವಿಹಿತವೆಂದು ತೋರುವಂಥ ಯಾವುವೇ ನಿಬಂಧನೆಗಳು ಅಥವಾ ಪರಿಬಂಧಗಳನ್ನು ವಿಧಿಸಬಹುದು ಮತ್ತು ನ್ಯಾಯಾಲಯಕ್ಕೆ ಕಾಲಕಾಲಕ್ಕೆ ಹಾಗೆ ಮಾಡುವುದು ವಿಹಿತವೆಂದು ಕಂಡುಬಂದರೆ ಹೊಸ ನ್ಯಾಸಧಾರಿಯನ್ನು ನೇಮಕ ಮಾಡಬಹುದು.

## X.- ಆಸ್ತಿ ವ್ಯವಸ್ಥೆಗಳು

**39. [ಬಿಟ್ಟುಬಿಡಲಾಗಿದೆ.]**

**40. ವಿವಾಹ ಪೂರ್ವದ ಅಥವಾ ವಿವಾಹ ನಂತರದ ಆಸ್ತಿ ವ್ಯವಸ್ಥೆಗಳ ಅಸ್ತಿತ್ವದ ಬಗ್ಗೆ ವಿಚಾರಣೆ.–** ಜಿಲ್ಲಾ ನ್ಯಾಯಾಲಯವು ವಿವಾಹದ ವಿಘಟನೆಗಾಗಿನ ಡಿಕ್ರಿಯನ್ನು ಅಥವಾ ವಿವಾಹದ ಅನೂರ್ಜಿತದ

ಡಿಕ್ರಿಯನ್ನು ಹೊರಡಿಸುವುದಕ್ಕೆ ಮುಂಚೆ, ಯಾರ ವಿವಾಹವು ಡಿಕ್ರಿಯ ವಸ್ತುವಿಷಯವಾಗಿರುವುದೋ ಆ ಪಕ್ಷಕಾರರ ಬಗ್ಗೆ ಮಾಡಿದ ವಿವಾಹ ಪೂರ್ವದ ಅಥವಾ ವಿವಾಹ ನಂತರದ ಆಸ್ತಿ ವ್ಯವಸ್ಥೆಗಳ ಅಸ್ತಿತ್ವದ ಬಗ್ಗೆ ವಿಚಾರಣೆ ಮಾಡಬಹುದು ಮತ್ತು ವ್ಯವಸ್ಥೆ ಮಾಡಿದ ಸ್ವತ್ತಿನ ಪೂರ್ಣ ಅಥವಾ ಅದರ ಭಾಗವನ್ನು, ಗಂಡನ ಪ್ರಯೋಜನಕ್ಕಾಗಿಯಾಗಲಿ ಅಥವಾ ಹೆಂಡತಿಯ ಪ್ರಯೋಜನಕ್ಕಾಗಿಯಾಗಲಿ ಅಥವಾ ವಿವಾಹದ ಮಕ್ಕಳು (ಯಾರಾದರೂ ಇದ್ದರೆ) ಅವರ ಅಥವಾ ಮಕ್ಕಳು ಮತ್ತು ತಂದೆ/ತಾಯಿಗಳಿಬ್ಬರ ಪ್ರಯೋಜನಕ್ಕಾಗಿಯಾಗಲಿ ವಿನಿಯೋಗಿಸುವುದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಸೂಕ್ತವೆಂದು ತೋರುವಂಥ ಆದೇಶಗಳನ್ನು ಮಾಡಬಹುದು:

ಪರಂತು, ನ್ಯಾಯಾಲಯವು, ಮಕ್ಕಳ ವೆಚ್ಚದಲ್ಲಿ ತಂದೆ–ತಾಯಿಗಳ ಅಥವಾ ಅವರಲ್ಲಿ ಯಾರೊಬ್ಬರ ಪ್ರಯೋಜನಕ್ಕಾಗಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

## XI.- ಮಕ್ಕಳ ಅಭಿರಕ್ಷೆ

**41. ಪ್ರತ್ಯೇಕತೆಗಾಗಿನ ದಾವೆಯಲ್ಲಿ ಮಕ್ಕಳ ಅಭಿರಕ್ಷೆಯ ಬಗ್ಗೆ ಆದೇಶಗಳನ್ನು ಮಾಡಲು ಅಧಿಕಾರ.–** ನ್ಯಾಯಿಕ ಪ್ರತ್ಯೇಕತೆಯನ್ನು ಪಡೆಯುವುದಕ್ಕಾಗಿನ ಯಾವುದೇ ದಾವೆಯಲ್ಲಿ ನ್ಯಾಯಾಲಯವು, ಕಾಲಕಾಲಕ್ಕೆ ಅದರ ಡಿಕ್ರಿಯನ್ನು ಮಾಡುವುದಕ್ಕೆ ಮುಂಚೆ, ಯಾರ ತಂದೆ–ತಾಯಿಗಳ ವಿವಾಹವು ಅಂಥ ದಾವೆಯ ವಸ್ತುವಾಗಿರುವುದೋ ಅವರ ಅಪ್ರಾಪ್ತ ವಯಸ್ಕ ಮಕ್ಕಳ ಅಭಿರಕ್ಷೆ, ಜೀವನ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅದು ಸರಿಯೆಂದು ಭಾವಿಸುವಂಥ ಮಧ್ಯಕಾಲೀನ ಆದೇಶಗಳನ್ನು ಮಾಡಬಹುದು ಮತ್ತು ಆ ಡಿಕ್ರಿಯಲ್ಲಿ ಅಂಥ ಏರ್ಪಾಟನ್ನು ಮಾಡಬಹುದು ಮತ್ತು ಅದು ಸೂಕ್ತವೆಂದು ಯೋಚಿಸಿದರೆ, ಸದರಿ ನ್ಯಾಯಾಲಯದ ಸಂರಕ್ಷಣೆಯಲ್ಲಿ ಅಂಥ ಮಕ್ಕಳನ್ನು ಇಡುವುದಕ್ಕಾಗಿ ಕೈಗೊಳ್ಳಬೇಕಾದ ವ್ಯವಹರಣೆಗಳನ್ನು ನಿರ್ದೇಶಿಸಬಹುದು:

ಪರಂತು, ಇತ್ಯರ್ಥದಲ್ಲಿರುವ ದಾವೆಯ ಅಪ್ರಾಪ್ತ ಮಕ್ಕಳ ಜೀವನ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಅರ್ಜಿಯನ್ನು ಸಾಧ್ಯವಾದಷ್ಟು ಬೇಗನೆ, ಪ್ರತ್ಯರ್ಜಿದಾರನಿಗೆ ನೋಟೀಸ್ ನೀಡಿದ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ವಿಲೆಗೊಳಿಸತಕ್ಕದ್ದು.

**42. ಡಿಕ್ರಿಯ ತರುವಾಯ ಅಂಥ ಆದೇಶಗಳನ್ನು ಮಾಡಲು ಅಧಿಕಾರ.–** ನ್ಯಾಯಾಲಯವು, ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಯ ತರುವಾಯ, ಈ ಉದ್ದೇಶಕ್ಕಾಗಿನ ಮನವಿ (ಅರ್ಜಿಯ ಮೂಲಕ)ಯ ಮೇಲೆ ಯಾರ ತಾಯಿ–ತಂದೆಗಳ ವಿವಾಹವು ಡಿಕ್ರಿಯ ವಿಷಯವಾಗಿರುವುದೋ ಅವರ ಅಪ್ರಾಪ್ತ ವಯಸ್ಕ ಮಕ್ಕಳ ಅಭಿರಕ್ಷೆ, ಜೀವನ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಥವಾ ಸದರಿ ನ್ಯಾಯಾಲಯದ

ಸಂರಕ್ಷಣೆಯಲ್ಲಿ ಅಂಥ ಮಕ್ಕಳನ್ನು ಇಡುವುದಕ್ಕಾಗಿ ಅಂಥ ಡಿಕ್ರಿಯನ್ನು ಪಡೆಯುವುದಕ್ಕಾಗಿನ ವ್ಯವಹರಣೆಗಳು ಇನ್ನೂ ಇತ್ಯರ್ಥದಲ್ಲಿದ್ದ ಸಂದರ್ಭದಲ್ಲಿ, ಅಂಥ ಡಿಕ್ರಿಯ ಮೂಲಕ ಅಥವಾ ಮಧ್ಯಕಾಲೀನ ಆದೇಶಗಳ ಮೂಲಕ ಮಾಡಬಹುದಾಗಿದ್ದಂತೆ ಎಲ್ಲಾ ಅಂಥ ಆದೇಶಗಳನ್ನು ಮತ್ತು ವ್ಯವಸ್ಥೆಯನ್ನು ಕಾಲಕಾಲಕ್ಕೆ ಮಾಡಬಹುದು.

**43. ವಿಘಟನೆ ಅಥವಾ ಅನೂರ್ಜಿತತೆಗಾಗಿನ ದಾವೆಗಳಲ್ಲಿ ಮಕ್ಕಳ ಅಭಿರಕ್ಷೆಯ ಬಗ್ಗೆ ಆದೇಶಗಳನ್ನು ಮಾಡಲು ಅಧಿಕಾರ.–** ವಿವಾಹ ವಿಘಟನೆಯನ್ನು ಅಥವಾ ವಿವಾಹದ ಅನೂರ್ಜಿತದ ಡಿಕ್ರಿಯನ್ನು ಪಡೆಯುವುದಕ್ಕಾಗಿ ಉಚ್ಚ ನ್ಯಾಯಾಲಯದಲ್ಲಿ ಹೂಡಿದ ಯಾವುದೇ ದಾವೆಯಲ್ಲಿ, ಆ ನ್ಯಾಯಾಲಯವು ಕಾಲಕಾಲಕ್ಕೆ ಅದರ ಡಿಕ್ರಿಯನ್ನು ಮಾಡುವುದಕ್ಕೆ ಮುಂಚೆ, ಯಾರ ತಂದೆ–ತಾಯಿಗಳ ವಿವಾಹವು ದಾವೆಯ ವಸ್ತುವಾಗಿರುವುದೋ ಅವರ ಅಪ್ರಾಪ್ತ ವಯಸ್ಕ ಮಕ್ಕಳ ಅಭಿರಕ್ಷೆ, ಜೀವನ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಸರಿಯೆಂದು ಭಾವಿಸುವಂತೆ ಅಂಥ ಮಧ್ಯಕಾಲೀನ ಆದೇಶಗಳನ್ನು ಮಾಡಬಹುದು;

ಮತ್ತು ಅದು ಸೂಕ್ತವೆಂದು ಯೋಚಿಸಿದರೆ, ನ್ಯಾಯಾಲಯದ ಸಂರಕ್ಷಣೆಯಲ್ಲಿ ಅಂಥ ಮಕ್ಕಳನ್ನು ಇಡುವುದಕ್ಕಾಗಿ ಕೈಗೊಳ್ಳಬೇಕಾದ ವ್ಯವಹರಣೆಗಳನ್ನು ನಿರ್ದೇಶಿಸಬಹುದು.

**44. ಡಿಕ್ರಿ ಅಥವಾ ಸ್ಥಿರೀಕರಣದ ತರುವಾಯ ಅಂಥ ಆದೇಶಗಳನ್ನು ಮಾಡಲು ಅಧಿಕಾರ.–** ವಿವಾಹದ ವಿಘಟನೆಗಾಗಿನ ಡಿಕ್ರಿಯನ್ನು ಅಥವಾ ವಿವಾಹದ ಅನೂರ್ಜಿತದ ಡಿಕ್ರಿಯನ್ನು ಹೊರಡಿಸಿದ ತರುವಾಯ, ಜಿಲ್ಲಾ ನ್ಯಾಯಾಲಯವು, ಆ ಉದ್ದೇಶಕ್ಕಾಗಿ ಪಕ್ಷಕಾರರು ಮಾಡಿಕೊಂಡ ಅರ್ಜಿಯ ಮೇಲೆ ಕಾಲಕಾಲಕ್ಕೆ, ಯಾರ ತಂದೆ–ತಾಯಿಗಳ ವಿವಾಹವು ಡಿಕ್ರಿಯ ವಿಷಯವಾಗಿತ್ತೋ, ಅವರ ಅಪ್ರಾಪ್ತ ವಯಸ್ಕ ಮಕ್ಕಳ ಅಭಿರಕ್ಷೆ, ಜೀವನ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಅಥವಾ ಸದರಿ ನ್ಯಾಯಾಲಯದ ಸಂರಕ್ಷಣೆಯಲ್ಲಿ ಅಂಥ ಮಕ್ಕಳನ್ನು ಇಡುವುದಕ್ಕೆ ಸಂಬಂಧಪಟ್ಟಂತೆ, ಅಂಥ ನಿರುಪಾಧಿಕ ಡಿಕ್ರಿ ಅಥವಾ (ಸಂದರ್ಭಾನುಸಾರ) ಡಿಕ್ರಿಯ ಮೂಲಕ ಅಥವಾ ಹಿಂದೆ ಹೇಳಿದಂತೆ ಅಂಥ ಮಧ್ಯಕಾಲೀನ ಆದೇಶಗಳ ಮೂಲಕ ಮಾಡಬಹುದಾಗಿದ್ದಂಥ ಎಲ್ಲಾ ಆದೇಶಗಳನ್ನು ಮತ್ತು ಏರ್ಪಾಟನ್ನು ಮಾಡಬಹುದು.

## XII.- ಪ್ರಕ್ರಿಯೆ

**45. ಸಿವಿಲ್ ಪ್ರಕ್ರಿಯಾ ಸಂಹಿತೆಯು ಅನ್ವಯವಾಗತಕ್ಕದ್ದು.–** ಇದರಲ್ಲಿ ಅಡಕವಾಗಿರುವ ಉಪಬಂಧಗಳಿಗೊಳಪಟ್ಟು, ಪಕ್ಷಕಾರರ ನಡುವೆ ಈ ಅಧಿನಿಯಮದ ಮೇರೆಗಿನ ಎಲ್ಲಾ ವ್ಯವಹರಣೆಗಳು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೂಲಕ ನಿಯಂತ್ರಿತವಾಗತಕ್ಕದ್ದು.

**46. ಅರ್ಜಿಗಳ ಮತ್ತು ಹೇಳಿಕೆಗಳ ನಮೂನೆಗಳು.–** ಈ ಅಧಿನಿಯಮದ ಅನುಸೂಚಿಯಲ್ಲಿ ನಿರೂಪಿಸಿರುವ ನಮೂನೆಗಳನ್ನು, ಪ್ರತಿಯೊಂದು ಪ್ರಕರಣದ ಸಂದರ್ಭಗಳು ಅವಶ್ಯಪಡಿಸುವಂಥ ಬದಲಾವಣೆಯೊಂದಿಗೆ ಅಂಥ ಅನುಸೂಚಿಯಲ್ಲಿ ನಮೂದಿಸಿದ ಅನುಕ್ರಮ ಉದ್ದೇಶಗಳಿಗಾಗಿ ಉಪಯೋಗಿಸಬಹುದು.

**47. ಅರ್ಜಿಯು ಶಾಮೀಲಾಗಿಲ್ಲದಿರುವುದನ್ನು ನಿರೂಪಿಸತಕ್ಕದ್ದು.–** ವಿವಾಹದ ವಿಘಟನೆ ಅಥವಾ ವಿವಾಹದ ಅನೂರ್ಜಿತದ ಅಥವಾ ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಗಾಗಿನ ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯು, ಅರ್ಜಿದಾರ ಮತ್ತು ವಿವಾಹದ ಇನ್ನೊಬ್ಬ ಪಕ್ಷಕಾರನ ನಡುವೆ ಯಾವುದೇ ಶಾಮೀಲು ಅಥವಾ ಪರೋಕ್ಷ ಸಮ್ಮತಿ ಇಲ್ಲ ಎಂಬುದನ್ನು ನಿರೂಪಿಸತಕ್ಕದ್ದು.

**ಹೇಳಿಕೆಗಳನ್ನು ಸತ್ಯಾಪನೆ ಮಾಡತಕ್ಕದ್ದು.–** ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯಲ್ಲಿ ಅಡಕವಾಗಿರುವ ಹೇಳಿಕೆಗಳನ್ನು, ಅರ್ಜಿದಾರ ಅಥವಾ ಬೇರೊಬ್ಬ ಸಕ್ಷಮ ವ್ಯಕ್ತಿಯು ವಾದಪತ್ರಗಳ ಸತ್ಯಾಪನೆಗಾಗಿ ಕಾನೂನಿನ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅವನ್ನು ವಿಚಾರಣೆಯಲ್ಲಿ ಸಾಕ್ಷ್ಯದಂತೆ ಉಲ್ಲೇಖಿಸಬಹುದು.

**48. ಮನೋವಿಕಲರ ಪರವಾಗಿ ದಾವೆಗಳು.–** ಗಂಡ ಅಥವಾ ಹೆಂಡತಿಯು ಮನೋವಿಕಲ ಅಥವಾ ಹುಟ್ಟು ದಡ್ಡ ಆಗಿರುವಾಗ, ಈ ಅಧಿನಿಯಮದ ಮೇರೆಗಿನ ಯಾವುದೇ ದಾವೆಯನ್ನು (ದಾಂಪತ್ಯ ಹಕ್ಕುಗಳ ಪುನಃ ಸ್ಥಾಪನೆಗಾಗಿನ ದಾವೆಯನ್ನು ಹೊರತುಪಡಿಸಿ) ಅವನ ಅಥವಾ ಅವಳ ಅಭಿರಕ್ಷೆಗೆ ಹಕ್ಕುಳ್ಳ ಸಮಿತಿ ಅಥವಾ ಇತರ ವ್ಯಕ್ತಿಯು ಅವನ ಅಥವಾ ಅವಳ ಪರವಾಗಿ ತರಬಹುದು.

**49. ಅಪ್ರಾಪ್ತ ವಯಸ್ಕರಿಂದ ದಾವೆಗಳು.–** ಅರ್ಜಿದಾರನು/ಳು ಅಪ್ರಾಪ್ತ ವಯಸ್ಕನಾ/ಳಾಗಿರುವಲ್ಲಿ, ಅವನು ಅಥವಾ ಅವಳು, ನ್ಯಾಯಾಲಯವು ಅನುಮೋದಿಸಬೇಕಾದ ಅವನ ಅಥವಾ ಅವಳ ವಾದಮಿತ್ರನ ಮೂಲಕ ದಾವೆ ಹೂಡತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅಪ್ರಾಪ್ತ ವಯಸ್ಕನು ಸಲ್ಲಿಸಿದ ಯಾವುದೇ ಅರ್ಜಿಯನ್ನು, ಖರ್ಚುಗಳಿಗೆ ಜವಾಬ್ದಾರನಾಗಿರಲು ಬರಹದಲ್ಲಿ ವಾದಮಿತ್ರನು ವಚನಬಂಧನಾಗುವವರೆಗೆ ದಾಖಲು ಮಾಡತಕ್ಕದ್ದಲ್ಲ.

ಅಂಥ ವಚನಬಂಧವನ್ನು ನ್ಯಾಯಾಲಯದಲ್ಲಿ ದಾಖಲ್ಮಾಡತಕ್ಕದ್ದು ಮತ್ತು ಆ ವಾದಮಿತ್ರನು, ಅವನು ಸಾಮಾನ್ಯ ದಾವೆಯಲ್ಲಿ ವಾದಿಯಾಗಿದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಹೊಣೆಗಾರನಾಗಿರತಕ್ಕದ್ದು.

**50. ಅರ್ಜಿಯ ಜಾರಿ.–** ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ಅದರ ಮೂಲಕ ಬಾಧಿತನಾಗುವ ಪಕ್ಷಕಾರನಿಗೆ ಭಾರತದೊಳಗೆ ಆಗಲಿ ಅಥವಾ ಹೊರಗೆ ಆಗಲಿ ಉಚ್ಚ ನ್ಯಾಯಾಲಯವು ಕಾಲಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶಿಸುವಂಥ ರೀತಿಯಲ್ಲಿ ಜಾರಿ ಮಾಡತಕ್ಕದ್ದು:

ಪರಂತು, ಆ ನ್ಯಾಯಾಲಯಕ್ಕೆ ಅಂಥ ಜಾರಿಯನ್ನು ಪೂರ್ತಿಯಾಗಿ ಬಿಟ್ಟುಬಿಡಬಹುದು, ಅವಶ್ಯವೆಂದು ಅಥವಾ ವಿಹಿತವೆಂದು ಕಂಡಬಂದ ಸಂದರ್ಭದಲ್ಲಿ ಹಾಗೆ ಮಾಡಬಹುದು.

**51. ಸಾಕ್ಷ್ಯವನ್ನು ಪಡೆದುಕೊಳ್ಳುವ ವಿಧಾನ.–** ನ್ಯಾಯಾಲಯದ ಮುಂದಿರುವ ಎಲ್ಲಾ ವ್ಯವಹರಣೆಗಳಲ್ಲಿ ಸಾಕ್ಷಿದಾರರನ್ನು, ಅವರ ಹಾಜರಾತಿಯನ್ನು ಪಡೆಯಲು ಸಾಧ್ಯವಾದಲ್ಲಿ ಮೌಖಿಕವಾಗಿ ಪರೀಕ್ಷಿಸತಕ್ಕದ್ದು ಮತ್ತು ಯಾರೇ ಪಕ್ಷಕಾರನು/ಳು ಅವನಾಗಿಯೇ ಅಥವಾ ಅವಳಾಗಿಯೇ ಒಬ್ಬ ಸಾಕ್ಷಿಯಂತೆ ಬರಬಹುದು ಮತ್ತು ಅವನನ್ನು/ಅವಳನ್ನು ಯಾವುದೇ ಇತರ ಸಾಕ್ಷಿಯಂತೆ ಪರೀಕ್ಷಿಸತಕ್ಕದ್ದು ಮತ್ತು ಪಾಟೀ ಸವಾಲು ಮಾಡಬಹುದು ಅಥವಾ ಮರುಪರೀಕ್ಷಿಸಬಹುದು:

ಪರಂತು, ಪಕ್ಷಕಾರರು ಅವರವರ ಅನುಕ್ರಮ ವಿಷಯವನ್ನು ಪೂರ್ತಿಯಾಗಿ ಅಥವಾ ಭಾಗಶಃ ಶಪಥಪತ್ರದ ಮೂಲಕ ಸತ್ಯಾಪನೆ ಮಾಡಲು ಸ್ವತಂತ್ರರಾಗಿರತಕ್ಕದ್ದು, ಆದರೆ ಪ್ರತಿಯೊಂದು ಅಂಥ ಶಪಥಪತ್ರದಲ್ಲಿನ ಶಪಥಪತ್ರಕಾರನು ಎದುರು ಪಕ್ಷಕಾರನ ಅರ್ಜಿಯ ಮೇಲೆ ಅಥವಾ ನ್ಯಾಯಾಲಯದ ನಿರ್ದೇಶನದಂತೆ ಎದುರು ಪಕ್ಷಕಾರನಿಂದ ಅಥವಾ ಅವನ ಪರವಾಗಿ ಮೌಖಿಕವಾಗಿ ಪಾಟೀಸವಾಲಿಗೊಳಪಡತಕ್ಕದ್ದು ಮತ್ತು ಅಂಥ ಪಾಟೀಸವಾಲಿನ ತರುವಾಯ, ಅಂಥ ಶಪಥಪತ್ರವನ್ನು ಸಲ್ಲಿಸಿದ ಪಕ್ಷಕಾರನಿಂದ ಅಥವಾ ಅವನ ಪರವಾಗಿ ಹಿಂದೆ ಹೇಳಿದಂತೆ ಮೌಖಿಕವಾಗಿ ಮರುಪರೀಕ್ಷೆಗೆ ಒಳಪಡತಕ್ಕದ್ದು.

**52. ಕ್ರೌರ್ಯ ಅಥವಾ ಪರಿತ್ಯಾಗದ ಬಗ್ಗೆ ಸಾಕ್ಷ್ಯವನ್ನು ಕೊಡಲು ಗಂಡ ಮತ್ತು ಹೆಂಡತಿಯ ಸಕ್ಷಮತೆ.–** ಗಂಡ ಅಥವಾ ಹೆಂಡತಿಯು ಅವನ/ಅವಳ ವಿವಾಹವನ್ನು, ಅವನ ಹೆಂಡತಿಯು/ ಅವಳ ಗಂಡನು ವ್ಯಭಿಚಾರ, ಕ್ರೌರ್ಯದೊಂದಿಗೆ ಪರಸತಿ ಸಂಗದ ಅಥವಾ ಯುಕ್ತ ಕಾರಣವಿಲ್ಲದೆ ಪರಿತ್ಯಾಗದೊಂದಿಗೆ ಪರಸತಿ ಸಂಗದ ತಪ್ಪಿತಸ್ಥನಾಗಿರುವನೆಂಬ/ಳೆಂಬ ಕಾರಣದ ಮೇಲೆ ವಿಘಟಿಸಬೇಕೆಂದು ಪ್ರಾರ್ಥಿಸಿ ಅವನು/ಅವಳು ಸಲ್ಲಿಸಿದ ಯಾವುದೇ ಅರ್ಜಿಯ ಮೇಲೆ ಅನುಕ್ರಮವಾಗಿ ಆ ಗಂಡ ಮತ್ತು ಹೆಂಡತಿಯು, ಅಂಥ ಕ್ರೌರ್ಯ ಅಥವಾ ಪರಿತ್ಯಾಗನದ ಅಥವಾ ಅದಕ್ಕೆ ಸಂಬಂಧಪಟ್ಟ ಸಾಕ್ಷ್ಯವನ್ನು ಕೊಡಲು ಸಕ್ಷಮರಾಗಿರತಕ್ಕದ್ದು ಮತ್ತು ಅವರನ್ನು ಅದಕ್ಕಾಗಿ ಒತ್ತಾಯಿಸಬಹುದು.

**53. ಬಾಗಿಲುಗಳನ್ನು ಮುಚ್ಚಲು ಅಧಿಕಾರ.–** ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ಇಡೀ ಅಥವಾ ಅದರ ಯಾವುದೇ ಭಾಗವನ್ನು, ನ್ಯಾಯಾಲಯವು ಸೂಕ್ತವೆಂದು ಯೋಚಿಸಿದರೆ, ಬಾಗಿಲುಗಳನ್ನು ಮುಚ್ಚಿಸಿ ವಿಚಾರಣೆ ಮಾಡಬಹುದು.

**54. ಮುಂದೂಡಲು ಅಧಿಕಾರ.–** ನ್ಯಾಯಾಲಯವು ಕಾಲಕಾಲಕ್ಕೆ ಈ ಅಧಿನಿಯಮದ ಮೇರೆಗಿನ ಯಾವುದೇ ಅರ್ಜಿಯ ವಿಚಾರಣೆಯನ್ನು ಮುಂದೂಡಬಹುದು ಮತ್ತು ಮತ್ತಷ್ಟು ಸಾಕ್ಷ್ಯವನ್ನು ಅಗತ್ಯಪಡಿಸುವುದು ಸೂಕ್ತವೆಂದು ಅದಕ್ಕೆ ಕಂಡುಬಂದರೆ ಹಾಗೆ ಮಾಡಬಹುದು.

**55. ಆದೇಶಗಳು ಮತ್ತು ಡಿಕ್ರಿಗಳ ಜಾರಿ ಮತ್ತು ಅವುಗಳಿಂದ ಅಪೀಲು.–** ಈ ಅಧಿನಿಯಮದ ಮೇರೆಗಿನ ಯಾವುದೇ ದಾವೆ ಅಥವಾ ವ್ಯವಹರಣೆಯಲ್ಲಿ, ನ್ಯಾಯಾಲಯವು ಮಾಡಿದ ಎಲ್ಲಾ ಡಿಕ್ರಿಗಳು ಮತ್ತು ಆದೇಶಗಳನ್ನು ನ್ಯಾಯಾಲಯವು ಅದರ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ಮಾಡಿದ ಅದರ ಡಿಕ್ರಿಗಳು ಮತ್ತು ಆದೇಶಗಳಂತೆ ಅದೇ ಆದೇಶಗಳ ಮೇರೆಗೆ ಅವುಗಳ ವಿರುದ್ಧ ಅಪೀಲು ಮಾಡಿಕೊಳ್ಳಬಹುದು:

**ಖರ್ಚುಗಳ ಬಗ್ಗೆ ಯಾವುದೇ ಅಪೀಲು ಇರತಕ್ಕದ್ದಲ್ಲ.–** ಪರಂತು, ಖರ್ಚುಗಳ ವಿಷಯದ ಮೇಲೆ ಮಾತ್ರವೇ ಯಾವುದೇ ಅಪೀಲು ಇರತಕ್ಕದ್ದಲ್ಲ.

**56. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು.–** ಯಾರೇ ವ್ಯಕ್ತಿಯು, ಅಪೀಲಿನ ಮೇಲೆ ಅಥವಾ ಅನ್ಯಥಾ ಈ ಅಧಿನಿಯಮದ ಮೇರೆಗೆ ಉಚ್ಚ ನ್ಯಾಯಾಲಯದ ಯಾವುದೇ ಡಿಕ್ರಿ (ಷರತ್ತು ಪೂರ್ವಕ ಡಿಕ್ರಿಯನ್ನು ಹೊರತುಪಡಿಸಿ) ಅಥವಾ ಆದೇಶದ ವಿರುದ್ಧ ಮತ್ತು ಉಚ್ಚ ನ್ಯಾಯಾಲಯದ ಅಥವಾ ಯಾವುದೇ ವಿಭಾಗ ನ್ಯಾಯಾಲಯದ ನ್ಯಾಯಾಧೀಶರು ಮೂಲ ಅಧಿಕಾರವ್ಯಾಪ್ತಿಯನ್ನು ಚಲಾಯಿಸಿ ಮಾಡಿದ, ಯಾವುದರಿಂದ ಉಚ್ಚ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದಲ್ಲವೋ, ಆ ಯಾವುದೇ ಡಿಕ್ರಿ (ಷರತ್ತು ಪೂರ್ವಕ ಡಿಕ್ರಿಯನ್ನು ಹೊರತುಪಡಿಸಿ) ಅಥವಾ ಆದೇಶದ ವಿರುದ್ಧ, ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಳ್ಳಲು ಆ ಪ್ರಕರಣವು ಯೋಗ್ಯವಾಗಿದೆ ಎಂದು ಉಚ್ಚ ನ್ಯಾಯಾಲಯವು ಘೋಷಿಸಿದಾಗ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು.

## XIII.– ಪುನರ್ ವಿವಾಹ

**57. ಪುನರ್ ವಿವಾಹವಾಗಲು ಪಕ್ಷಕಾರರಿಗೆ ಸ್ವಾತಂತ್ರ್ಯ.–** ವಿವಾಹದ ವಿಘಟನೆಗಾಗಿನ ಅಥವಾ ಅನೂರ್ಜಿತತೆಗಾಗಿನ ಡಿಕ್ರಿಯನ್ನು ಹೊರಡಿಸಿದ್ದರೆ, ಉಚ್ಚ ನ್ಯಾಯಾಲಯವು ಸೇರಿದಂತೆ ಯಾವುದೇ

ನ್ಯಾಯಾಲಯಕ್ಕೆ ಅಂಥ ಡಿಕ್ರಿಯ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸದಿರುವಾಗ ಅಥವಾ ಅಪೀಲನ್ನು ಸಲ್ಲಿಸಿದ್ದು, ಆದರೆ ಅಂಥ ಅಪೀಲನ್ನು ವಜಾ ಮಾಡಿರುವಾಗ ಮತ್ತು ಡಿಕ್ರಿ ಅಥವಾ ವಜಾಗೊಳಿಸುವುದು ಅಂತಿಮಗೊಳಿಸುವುದಕ್ಕೆ ಯೋಗ್ಯವಾಗಿರುವಾಗ ಇಬ್ಬರೂ ಪಕ್ಷಕಾರರುಗಳು ಪುನಃ ವಿವಾಹವಾಗುವುದು ಕಾನೂನುಬದ್ಧವಾಗಿರತಕ್ಕದ್ದು:

**58. ಪರಸತಿ ಸಂಗಕ್ಕಾಗಿ ವಿವಾಹ ವಿಚ್ಛೇದನಗೊಂಡ ವ್ಯಕ್ತಿಗಳ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸಲು ಆಂಗ್ಲ ಪಾದ್ರಿಯನ್ನು ಒತ್ತಾಯಿಸತಕ್ಕದ್ದಲ್ಲ.–** ಇಂಗ್ಲೆಂಡಿನ ಚರ್ಚಿನ ಧರ್ಮ ಬೋಧಕರ ವರ್ಗದಲ್ಲಿನ ಯಾರೇ ಪಾದ್ರಿಯನ್ನು, ಯಾವ ವ್ಯಕ್ತಿಯ ಮುಂಚಿನ ವಿವಾಹವನ್ನು ಅವನ ಅಥವಾ ಅವಳ ಪರಸತಿ/ಪರಪುರುಷ ಸಂಗದ ಆಧಾರದ ಮೇಲೆ ವಿಘಟಿಸಲಾಗಿದೆಯೋ ಆ ಯಾರೇ ವ್ಯಕ್ತಿಯ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲು ಒತ್ತಾಯಿಸತಕ್ಕದ್ದಲ್ಲ ಅಥವಾ ಯಾರೇ ಅಂಥ ವ್ಯಕ್ತಿಯ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಿದ್ದಕ್ಕಾಗಿ ಅಥವಾ ನೆರವೇರಿಸಲು ನಿರಾಕರಿಸಿದ್ದಕ್ಕಾಗಿ ಯಾವುದೇ ದಾವೆ, ದಂಡನೆ ಅಥವಾ ವಾಗ್ದಂಡನೆಗೆ ಅವನು ಗುರಿಯಾಗತಕ್ಕದ್ದಲ್ಲ.

**59. ಅವನ ಚರ್ಚಿನ ಬಳಕೆಯನ್ನು ವಿವಾಹ ಕಾರ್ಯಕ್ಕೆ ಅನುಮತಿಸಲು ನಿರಾಕರಿಸುವ ಆಂಗ್ಲ ಧರ್ಮಗುರು.–** ಯಾವುದೇ ಚರ್ಚ್ ಅಥವಾ ಕ್ರೈಸ್ತರ ಚಿಕ್ಕದೇವಾಲಯದ ಯಾರೇ ಧರ್ಮ ಗುರುವು, ಯಾವ ವ್ಯಕ್ತಿಗಳು ಅಂಥ ನಿರಾಕರಣೆ ಇಲ್ಲದಿದ್ದರೆ ಅಂಥ ಚರ್ಚ್ ಅಥವಾ ಕ್ರೈಸ್ತರ ಚಿಕ್ಕದೇವಾಲಯದಲ್ಲಿ ವಿವಾಹ ಸೇವೆಯನ್ನು ನೆರವೇರಿಸಿಕೊಳ್ಳಲು ಹಕ್ಕುಳ್ಳವರಾಗುತ್ತಿದ್ದರೋ ಆ ಯಾರೇ ವ್ಯಕ್ತಿಗಳ ನಡುವೆ, ಅಂಥ ವಿವಾಹ ಸೇವೆಯನ್ನು ನೆರವೇರಿಸಲು ನಿರಾಕರಿಸಿದಾಗ, ಅಂಥ ಧರ್ಮ ಗುರುವು ಯಾವ ಬಿಷಪ್ಪಿನ ಆಡಳಿತ ಪ್ರಾಂತದಲ್ಲಿ ಅಂಥ ಚರ್ಚ್ ಅಥವಾ ಕ್ರೈಸ್ತರ ಚಿಕ್ಕದೇವಾಲಯವು ಇರುವುದೋ ಆ ಬಿಷಪ್ಪಿನ ಆಡಳಿತ ಪ್ರಾಂತದೊಳಗೆ ಪೌರೋಹಿತ್ಯ ನಡೆಸಲು ಹಕ್ಕುಳ್ಳ ಸದರಿ ಚರ್ಚಿನ ಧರ್ಮಬೋಧಕರ ವರ್ಗದಲ್ಲಿನ ಯಾರೇ ಇತರ ಧರ್ಮಗುರುವಿಗೆ ಅಂಥ ವಿವಾಹ ಸೇವೆಯನ್ನು ಅಂಥ ಚರ್ಚ್ ಅಥವಾ ಕ್ರೈಸ್ತರ ಚಿಕ್ಕದೇವಾಲಯದಲ್ಲಿ ನೆರವೇರಿಸಲು ಅನುಮತಿಸತಕ್ಕದ್ದು.

## XIV.– ಸಂಕೀರ್ಣ

**60. ವಿಪರ್ಯಯವಾಗುವುದಕ್ಕೆ ಮುಂಚೆ ಪ್ರತ್ಯೇಕತೆಗಾಗಿನ ಡಿಕ್ರಿ ಅಥವಾ ಸಂರಕ್ಷಣಾ ಆದೇಶವು ಹೆಂಡತಿಯೊಂದಿಗೆ ವ್ಯವಹರಿಸುವ ವ್ಯಕ್ತಿಗಳ ಬಗ್ಗೆ ಸಿಂಧುವಾಗಿರುವುದು.–** ಈ ಅಧಿನಿಯಮದ ಮೇರೆಗೆ ಹೆಂಡತಿಯು ಪಡೆದುಕೊಂಡಿದ್ದ ನ್ಯಾಯಿಕ ಪ್ರತ್ಯೇಕತೆಗಾಗಿನ ಪ್ರತಿಯೊಂದು ಡಿಕ್ರಿ ಅಥವಾ ಸ್ವತ್ತನ್ನು ಸಂರಕ್ಷಿಸುವ ಆದೇಶವು, ಅದನ್ನು ವಿಪರ್ಯಯ ಅಥವಾ ವಿಮೋಚನೆಗೊಳಿಸುವವರೆಗೆ, ಆ

ಹೆಂಡತಿಯೊಂದಿಗೆ ವ್ಯವಹರಿಸುವ ಯಾರೇ ವ್ಯಕ್ತಿಯ ಸಂರಕ್ಷಣೆಗಾಗಿ ಅವಶ್ಯವಿರುವಷ್ಟರ ಮಟ್ಟಿಗೆ ಸಿಂಧುವಾಗಿದೆ ಎಂದು ಭಾವಿಸತಕ್ಕದ್ದು.

ಅಂಥ ಡಿಕ್ರಿ ಅಥವಾ ಆದೇಶದ ಯಾರೇ ವಿಪರ್ಯಯ, ವಿಮೋಚನೆ ಅಥವಾ ಬದಲಾವಣೆಯು, ಅಂಥ ಡಿಕ್ರಿ ಅಥವಾ ಆದೇಶದ ದಿನಾಂಕ ಮತ್ತು ಅದರ ವಿಪರ್ಯಯ, ವಿಮೋಚನೆ ಅಥವಾ ಬದಲಾವಣೆಯ ದಿನಾಂಕದ ನಡುವೆ ಮಾಡಿಕೊಂಡ ಅಥವಾ ಮಾಡಿದ ಹೆಂಡತಿಯ ಯಾವುವೇ ಕರಾರುಗಳು ಅಥವಾ ಕಾರ್ಯಗಳಿಗೆ ಸಂಬಂಧಿಸಿದಂತೆ ಯಾರೇ ಇತರ ವ್ಯಕ್ತಿಯು ಅನ್ಯಥಾ ಹೊಂದಿರಬಹುದಾಗಿದ್ದಂಥ ಯಾವುವೇ ಹಕ್ಕುಗಳು ಅಥವಾ ಪರಿಹಾರೋಪಾಯಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**ಡಿಕ್ರಿ ಅಥವಾ ಸಂರಕ್ಷಣಾ ಆದೇಶದ ವಿಪರ್ಯಯದ ನೋಟೀಸಿಲ್ಲದೆ ಹೆಂಡತಿಗೆ ಸಂದಾಯವನ್ನು ಮಾಡುವ ವ್ಯಕ್ತಿಗಳಿಗೆ ನಷ್ಟ ಭರ್ತಿ.–** ಯಾವುದೇ ಅಂಥ ಡಿಕ್ರಿ ಅಥವಾ ಆದೇಶವನ್ನು ಆಧರಿಸಿ ಅದನ್ನು ಪಡೆದುಕೊಂಡಿರುವ ಹೆಂಡತಿಗೆ ಯಾವುದೇ ಸಂದಾಯವನ್ನು ಮಾಡುವ ಅಥವಾ ಅವಳು ಯಾವುದೇ ವರ್ಗಾವಣೆ ಅಥವಾ ಕಾರ್ಯವನ್ನು ಮಾಡುವಂತೆ ಅಥವಾ ಮಾಡಲು ಅನುಮತಿಸುವ ಎಲ್ಲಾ ವ್ಯಕ್ತಿಗಳು, ಅಂಥ ಡಿಕ್ರಿ ಅಥವಾ ಆದೇಶವನ್ನು ಆಗ ವಿಪರ್ಯಯ, ವಿಮೋಚನೆ ಅಥವಾ ಬದಲಾವಣೆ ಮಾಡಿರಬಹುದಾಗಿದ್ದಾಗ್ಯೂ ಅಥವಾ ಅವಳ ಗಂಡನಿಂದ ಹೆಂಡತಿಯು ಪ್ರತ್ಯೇಕವಾಗಿರುವುದು ನಿಂತುಹೋಗಿದ್ದಾಗ್ಯೂ ಅಥವಾ ಆ ಡಿಕ್ರಿ ಅಥವಾ ಆದೇಶವನ್ನು ಮಾಡಿದ ನಂತರ ಯಾವೊಂದು ಕಾಲದಲ್ಲಿ ಮುಂದುವರಿಸದಿದ್ದಾಗ್ಯೂ ಅಂಥ ಸಂದಾಯ, ವರ್ಗಾವಣೆ ಅಥವಾ ಇತರ ಕಾರ್ಯದ ಕಾಲದಲ್ಲಿ ಅಂಥ ಡಿಕ್ರಿ ಅಥವಾ ಆದೇಶವು ಸಿಂಧುವಾಗಿದಿದ್ದರೆ ಮತ್ತು ಇನ್ನೂ ಬದಲಾವಣೆ ಇಲ್ಲದೆ ಅಸ್ತಿತ್ವದಲ್ಲಿದ್ದಿದ್ದರೆ ಮತ್ತು ಪ್ರತ್ಯೇಕತೆಯು ನಿಂತುಹೋಗದೆ ಇದ್ದಿದ್ದರೆ ಅಥವಾ ಮುಂದುವರಿಯದೆ ಇದ್ದಿದ್ದರೆ ಹೇಗೋ ಹಾಗೆ,

ಆ ಸಂದಾಯ, ವರ್ಗಾವಣೆ ಅಥವಾ ಇತರ ಕಾರ್ಯದ ಕಾಲದಲ್ಲಿ ಅಂಥ ವ್ಯಕ್ತಿಗಳು ಆ ಡಿಕ್ರಿ ಅಥವಾ ಆದೇಶದ ವಿಪರ್ಯಯ, ವಿಮೋಚನೆ ಅಥವಾ ಬದಲಾವಣೆಯು ಅಥವಾ ಪ್ರತ್ಯೇಕತೆಯು ನಿಂತು ಹೋಗಿರುವುದು ಅಥವಾ ಅದು ಮುಂದುವರಿಯದೇ ಇರುವುದರ ಬಗ್ಗೆ ನೋಟೀಸನ್ನು ಹೊಂದಿದ್ದ ಹೊರತು ಸಂರಕ್ಷಿತಗೊಳ್ಳತಕ್ಕದ್ದು ಮತ್ತು ನಷ್ಟ ಭರ್ತಿ ಪಡೆಯತಕ್ಕದ್ದು.

**61. ಜಾರತ್ವದ ಅಪರಾಧಕ್ಕಾಗಿ ದಾವೆಯ ನಿಷೇಧ.–** ಈ ಅಧಿನಿಯಮವು ಪ್ರವರ್ತನೆಗೆ ಬಂದ ತರುವಾಯ, ಎರಡು ಮತ್ತು ಹತ್ತನೇ ಪ್ರಕರಣಗಳ ಮೇರೆಗೆ ಅರ್ಜಿಯನ್ನು ಸಲ್ಲಿಸಲು ಸಕ್ಷಮನಾದ ಯಾರೇ ವ್ಯಕ್ತಿಯು ಅವನ ಹೆಂಡತಿಯೊಂದಿಗಿನ ಜಾರತ್ವದ ಅಪರಾಧಕ್ಕಾಗಿ ದಾವೆಯನ್ನು ಹೂಡತಕ್ಕದ್ದಲ್ಲ.

**62. ನಿಯಮ ರಚನಾಧಿಕಾರ.–** ಈ ಅಧಿನಿಯಮದ ಮೇರೆಗೆ ಉಚ್ಚ ನ್ಯಾಯಾಲಯವು, ಅದು ಕಾಲಕಾಲಕ್ಕೆ ವಿಹಿತವೆಂದು ಪರಿಗಣಿಸಬಹುದಾದಂಥ ನಿಯಮಗಳನ್ನು ರಚಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಅವುಗಳನ್ನು ಬದಲಾಯಿಸಬಹುದು ಮತ್ತು ಅವುಗಳಿಗೆ ಸೇರಿಸಬಹುದು:

ಪರಂತು, ಅಂಥ ನಿಯಮಗಳು, ಬದಲಾವಣೆಗಳು ಮತ್ತು ಸೇರ್ಪಡೆಗಳು ಈ ಅಧಿನಿಯಮದ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ಉಪಬಂಧಗಳಿಗೆ ಸುಸಂಗತವಾಗಿರಬೇಕು.

ಎಲ್ಲಾ ಅಂಥ ನಿಯಮಗಳು, ಬದಲಾವಣೆಗಳು ಮತ್ತು ಸೇರ್ಪಡೆಗಳನ್ನು ಸ್ಥಳೀಯ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

**ಅನುಸೂಚಿ**

**ನಮೂನೆಗಳ ಅನುಸೂಚಿ**

**ಸಂಖ್ಯೆ 1. – ಪರಪುರುಷ ಸಂಗದ ಕಾರಣದ ಮೇಲೆ ಸಹ–ಪ್ರತ್ಯರ್ಜಿದಾರನ ವಿರುದ್ಧ ಹಾನಿ ಪರಿಹಾರದೊಂದಿಗೆ ವಿವಾಹದ ವಿಘಟನೆಗಾಗಿ ಗಂಡನಿಂದ ಅರ್ಜಿ.**

(10 ಮತ್ತು 34ನೇ ಪ್ರಕರಣಗಳನ್ನು ನೋಡಿ)

------------- ದ (ಉಚ್ಚ) ನ್ಯಾಯಾಲಯದಲ್ಲಿ,

ಮಾನ್ಯ ಶ್ರೀ ನ್ಯಾಯಮೂರ್ತಿ -------------- ಗೆ (ಅಥವಾ ----------------- ದ ನ್ಯಾಯಾಧೀಶನಿಗೆ) 20-------ರ ---------ದ -------------ದಿವಸ --------------- ಎ.ಬಿ.ನ. ಅರ್ಜಿ--------- ಈ ಕೆಳಕಂಡಂತಿದೆ:-

1. ನಿಮ್ಮ ಅರ್ಜಿದಾರನು-----------ದ ---------------- ದಿವಸದಂದು 'ಸಿ-ಬಿ'ಳನ್ನು ಕಾನೂನುಸಮ್ಮತವಾಗಿ ವಿವಾಹವಾದನು. ಆಗ ಸಿ.ಡಿ ಳು -------------------------- ದಲ್ಲಿ ಅವಿವಾಹಿತೆಯಾಗಿದ್ದಳು.

2. ಅವನ ಸದರಿ ವಿವಾಹದಿಂದ, ನಿಮ್ಮ ಅರ್ಜಿದಾರನು ----------------- ದಲ್ಲಿನ -------------------- ಮತ್ತು ------------ದಲ್ಲಿ ಮತ್ತು ಕೊನೆಯದಾಗಿ --------------- ದಲ್ಲಿನ ---------------------- ದಲ್ಲಿ ಅವನ ಸದರಿ ಹೆಂಡತಿಯೊಂದಿಗೆ ವಾಸಿಸುತ್ತಿದ್ದನು ಮತ್ತು ಅವಳ ಸಹವಾಸದಲ್ಲಿದ್ದನು ಮತ್ತು ನಿಮ್ಮ ಅರ್ಜಿದಾರ ಮತ್ತು ಅವನ ಸದರಿ ಹೆಂಡತಿಯು ಅವರ ಸದರಿ ವಿವಾಹದಿಂದ ಐವರು ಮಕ್ಕಳನ್ನು ಹೊಂದಿದ್ದರು, ಅವರ ಪೈಕಿ ಅನುಕ್ರಮವಾಗಿ ಹನ್ನೆರಡು ಮತ್ತು ಹದಿನಾಲ್ಕು ವರ್ಷಗಳ ವಯಸ್ಸಿನ ಇಬ್ಬರು ಗಂಡು ಮಕ್ಕಳು ಮಾತ್ರ ಉಳಿದಿದ್ದಾರೆ.

3. ಸಾವಿರದೊಂಭೈನೂರು ------------ರ---------------ತಿಂಗಳ ------------- ದಿವಸಕ್ಕೆ ನಿಕಟಪೂರ್ವದಲ್ಲಿನ ಮೂರು ವರ್ಷಗಳ ಅವಧಿಯಲ್ಲಿ ಎಕ್ಸ್.ವೈ ನು ಕೆಲವು ಅಪವಾದಗಳೊಂದಿಗೆ ಹಿಂದೆ ಹೇಳಿದ ---------------ದ ನಿಮ್ಮ ಅರ್ಜಿದಾರನ ಮನೆಯಲ್ಲಿ ಸತತವಾಗಿ ವಾಸಿಸುತ್ತಿದ್ದನು ಮತ್ತು ಸದರಿ ಅವಧಿಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ------------- ಸದರಿ ಸಿ.ಬಿ. ಳು ನಿಮ್ಮ ಅರ್ಜಿದಾರನ ಸದರಿ ಮನೆಯಲ್ಲಿ ಸದರಿ ಎಕ್ಸ್.ವೈ. ನೊಂದಿಗೆ ಪರಪುರುಷ ಸಂಗವನ್ನು ಮಾಡಿದಳು. ಅವುಗಳ ದಿನಾಂಕಗಳು ನಿಮ್ಮ ಅರ್ಜಿದಾರನಿಗೆ ತಿಳಿದಿರಲಿಲ್ಲ.

4. ನಮ್ಮ ಸದರಿ ವಿವಾಹದ ವಿಘಟನೆಯಲ್ಲಿ ಪಡೆದುಕೊಳ್ಳುವ ಉದ್ದೇಶಕ್ಕಾಗಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ನನ್ನ ಮತ್ತು ನನ್ನ ಸದರಿ ಹೆಂಡತಿಯ ನಡುವೆ ಯಾವುದೇ ಶಾಮೀಲು ಅಥವಾ ಪರೋಕ್ಷ ಸಮ್ಮತಿ ಇರುವುದಿಲ್ಲ.

ಆದುದರಿಂದ, ಮಾನ್ಯ ನ್ಯಾಯಾಲಯವು, ಸದರಿ ವಿವಾಹದ ವಿಘಟನೆಯ ಮತ್ತು ನಿಮ್ಮ ಅರ್ಜಿದಾರನ ಸದರಿ ಹೆಂಡತಿಯೊಂದಿಗೆ ಸದರಿ ಎಕ್ಸ್.ವೈ. ನೂ ಪರಸತಿ ಸಂಗವನ್ನು ಮಾಡಿದ ಕಾರಣದಿಂದಾಗಿ ಹಾನಿ ಪರಿಹಾರವೆಂದು 5,000 ರೂಪಾಯಿಗಳ ಮೊತ್ತವನ್ನು ಸಂದಾಯ ಮಾಡಬೇಕೆಂದು ಅಂಥ ಹಾನಿ ಪರಿಹಾರಗಳನ್ನು ನಿಮ್ಮ ಅರ್ಜಿದಾರನಿಗೆ ಸಂದಾಯ ಮಾಡಬೇಕೆಂದು ಅಥವಾ ಈ ಮಾನ್ಯ ನ್ಯಾಯಾಲಯಕ್ಕೆ ಸೂಕ್ತವೆಂದು ಕಂಡುಬರುವಂತೆ ಅನ್ಯಥಾ ಸಂದಾಯ ಮಾಡಬೇಕೆಂದು ಅಥವಾ ವಿನಿಯೋಗಿಸಬೇಕೆಂದು, ಡಿಕ್ರಿ ಮಾಡಬೇಕೆಂದು ನಿಮ್ಮ ಅರ್ಜಿದಾರನು ಪ್ರಾರ್ಥಿಸುತ್ತಾನೆ.

(ರುಜು) ಎ.ಬಿ. (ಎ)

*ಸತ್ಯಾಪನೆಯ ನಮೂನೆ*

ಮೇಲ್ಕಂಡ ಅರ್ಜಿಯಲ್ಲಿ ಹೆಸರಿಸಿದ ಅರ್ಜಿದಾರ ಎ.ಬಿ.ನಾದ ನಾನು ಇದರಲ್ಲಿ ನಿರೂಪಿಸಿರುವುದು ನನ್ನ ತಿಳಿವಳಿಕೆ ಮತ್ತು ನಂಬುಗೆಯ ಮಟ್ಟಿಗೆ ಸತ್ಯವಾಗಿವೆಯೆಂದು ಘೋಷಿಸುತ್ತೇನೆ.

----

**ಸಂಖ್ಯೆ 2.– ಸಂ. 1ಕ್ಕೆ ಉತ್ತರವಾಗಿ ಪ್ರತ್ಯರ್ಜಿದಾರನ ವಿವರಪತ್ರ**

----------------- ದ ನ್ಯಾಯಾಲಯದಲ್ಲಿ ------------ ದ ---------- ದಿವಸ

ಅರ್ಜಿದಾರ, ಎ.ಬಿ.

ಪ್ರತ್ಯರ್ಜಿದಾರಳು, ಸಿ.ಬಿ. ಮತ್ತು ಸಹ ಪ್ರತ್ಯರ್ಜಿದಾರ

ಎಕ್ಸ್.ವೈ. ನಡುವೆ

ಸಿ.ಬಿ. ಪ್ರತ್ಯರ್ಜಿದಾರಳು ಅವಳ ನ್ಯಾಯವಾದಿ (ಅಥವಾ ವಕೀಲ)ನಾದ ಡಿ.ಇ. ನ ಮೂಲಕ ಎ.ಬಿ. ನ ಅರ್ಜಿಗೆ ಉತ್ತರವಾಗಿ, ಸದರಿ ಅರ್ಜಿಯ ಮೂರನೇ ಪ್ಯಾರಾದಲ್ಲಿ ಆಪಾದಿಸಿದಂತೆ, ಎಕ್ಸ್.ವೈ. ನೊಂದಿಗೆ

ಬೇರೆ ಬೇರೆ ಅಥವಾ ಯಾವುದೇ ಸಂದರ್ಭದಲ್ಲಿ ಅವಳು ಪರಪುರುಷ ಸಂಗವನ್ನು ಮಾಡಿದ್ದಾಳೆಂಬುದನ್ನು ಅವಳು ನಿರಾಕರಿಸುತ್ತಾಳೆಂದು ಹೇಳುತ್ತಾಳೆ.

ಆದುದರಿಂದ, ಪ್ರತ್ಯರ್ಜಿದಾರಳು ಸದರಿ ಅರ್ಜಿಯಲ್ಲಿ ತಿರಸ್ಕರಿಸುವಂತೆ ಮಾನ್ಯ ನ್ಯಾಯಾಲಯವನ್ನು ಪ್ರಾರ್ಥಿಸುತ್ತಾಳೆ.

(ರುಜು) ಸಿ.ಬಿ.

-----

**ಸಂಖ್ಯೆ 3.– ಸಂಖ್ಯೆ 1ಕ್ಕೆ ಉತ್ತರವಾಗಿ ಸಹ ಪ್ರತ್ಯರ್ಜಿದಾರನ ವಿವರಪತ್ರ.**

------------------ದ (ಉಚ್ಚ) ನ್ಯಾಯಾಲಯದಲ್ಲಿ,

----------------–ದ --------------ದಿವಸ

ಅರ್ಜಿದಾರ. ಎ.ಬಿ.

ಪ್ರತ್ಯರ್ಜಿದಾರಳು ಸಿ.ಬಿ. ಮತ್ತು

ಸಹ ಪ್ರತ್ಯರ್ಜಿದಾರ ಎಕ್ಸ್.ವೈ. ಇವರ ನಡುವೆ

ಈ ಪ್ರಕರಣದಲ್ಲಿ ದಾಖಲು ಮಾಡಿದ ಅರ್ಜಿಗೆ ಉತ್ತರವಾಗಿ ಸಹ ಪ್ರತ್ಯರ್ಜಿದಾರ ಎಕ್ಸ್.ವೈ.ನು, ಸದರಿ ಅರ್ಜಿಯಲ್ಲಿ ಆರೋಪಿಸಿದಂತೆ, ಸದರಿ ಸಿ.ಬಿ. ಯೊಂದಿಗೆ ಅವನು ಪರಸತಿ ಸಂಗವನ್ನು ಮಾಡಿರುವನೆಂಬುದನ್ನು ನಿರಾಕರಿಸಿ ಹೇಳುತ್ತಾನೆ.

ಆದುದರಿಂದ, ಸದರಿ ಎಕ್ಸ್.ವೈ.ನು ಮಾನ್ಯ ನ್ಯಾಯಾಲಯವನ್ನು ಸದರಿ ಅರ್ಜಿದಾರನ ಪ್ರಾರ್ಥನೆಯನ್ನು ತಿರಸ್ಕರಿಸುವಂತೆ ಮತ್ತು ಸದರಿ ಅರ್ಜಿಯ ಮತ್ತು ಅದಕ್ಕೆ ಪ್ರಾಸಂಗಿಕವಾದ ಖರ್ಚುಗಳನ್ನು ಸಂದಾಯ ಮಾಡುವಂತೆ ಅವನಿಗೆ ಆದೇಶಿಸಲು ಪ್ರಾರ್ಥಿಸುತ್ತಾನೆ.

(ರುಜು) ಎಕ್ಸ್.ವೈ.

-----

## ಸಂಖ್ಯೆ 4.– ವಿವಾಹದ ಅನೂರ್ಜಿತದ ಡಿಕ್ರಿಗಾಗಿ ಅರ್ಜಿ.

(18ನೇ ಪ್ರಕರಣವನ್ನು ನೋಡಿ)

------------- ದ (ಉಚ್ಚ) ನ್ಯಾಯಾಲಯದಲ್ಲಿ.

ಮಾನ್ಯ ಶ್ರೀ ನ್ಯಾಯಮೂರ್ತಿ ------------- ಗೆ (ಅಥವಾ -----------ದ ನ್ಯಾಯಾಧೀಶನಿಗೆ).

20 -----------ರ -------------- ತಿಂಗಳ --------------- ದಿವಸ.

ಎ.ಡಿ. ಎಂದು ಸುಳ್ಳಾಗಿ ಕರೆಯಲಾಗಿರುವ ಎ.ಬಿ.ನ ಅರ್ಜಿ ತೋರಿಸುತ್ತದೆ.

1. ಸಾವಿರದ ಒಂಬೈನೂರ --------------- ದ ----------- ದಿವಸದಂದು ನಿಮ್ಮ ಅರ್ಜಿದಾರಳು ಆಗ ಹದಿನೆಂಟು ವರ್ಷದವಳಾಗಿದ್ದು ಅವಿವಾಹಿತೆಯಾಗಿದ್ದು ------------ ದ (ಭಾರತದಲ್ಲಿನ ಯಾವುದೇ ಸ್ಥಳ) ಸುಮಾರು ಮೂವತ್ತು ವರ್ಷಗಳ ವಯಸ್ಸಿನ, ಆಗ ಬ್ರಹ್ಮಚಾರಿ ಆಗಿದ್ದ ಸಿ.ಡಿ.ನಿಗೆ ಕಾನೂನು ಪ್ರಕಾರ ಅಲ್ಲದಿದ್ದರೂ ವಾಸ್ತವವಾಗಿ ವಿವಾಹವಾಗಿದ್ದಳು.

2. ಸಾವಿರದ ಒಂಬೈನೂರ -------ರ ----------- ತಿಂಗಳ ಸದರಿ ------------ ದಿವಸದಿಂದ ಸಾವಿರದೊಂಬೈನೂರ -------ರ ------------ ತಿಂಗಳವರೆಗೆ ನಿಮ್ಮ ಅರ್ಜಿದಾರಳು ಸದರಿ ಸಿ.ಡಿ. ನೊಂದಿಗೆ ಬೇರೆ ಬೇರೆ ಸ್ಥಳಗಳಲ್ಲಿ ಮತ್ತು ವಿಶೇಷವಾಗಿ ಹಿಂದೆ ಹೇಳಿದ ---------- ದಲ್ಲಿ ವಾಸವಿದ್ದಳು ಮತ್ತು ಅವನ ಸಹವಾಸದಲ್ಲಿದ್ದಳು.

3. ಸದರಿ ಸಿ.ಡಿ.ನು ಇಂದ್ರಿಯ ಸಂಭೋಗದ ಮೂಲಕ ಸದರಿ ಸೋಗಿನ ವಿವಾಹವನ್ನು ಎಂದೂ ನಿಷೇಕ ಪ್ರಸ್ತದ ಮೂಲಕ ಪೂರ್ಣಗೊಳಿಸಿರಲಿಲ್ಲ.

4. ನಿಮ್ಮ ಅರ್ಜಿದಾರಳ ಸದರಿ ಸೋಗಿನ ವಿವಾಹವನ್ನು ನಡೆಸಿದ ಕಾಲದಲ್ಲಿ, ಸದರಿ ಸಿ.ಡಿ.ನು ಅವನ ಷಂಡತ್ವದ ಅಥವಾ ವಿಕೃತಿಯ ಕಾರಣದಿಂದಾಗಿ ವಿವಾಹದ ಕರಾರನ್ನು ಮಾಡಿಕೊಳ್ಳಲು ಕಾನೂನುಸಮ್ಮತವಾಗಿ ಅಸಮರ್ಥನಾಗಿದ್ದನು.

5. ಈ ದಾವೆಯ ವಸ್ತುವಿಗೆ ಸಂಬಂಧಿಸಿದಂತೆ ಅವಳ ಮತ್ತು ಸದರಿ ಸಿ.ಡಿ.ನ ನಡುವೆ ಯಾವುದೇ ಶಾಮೀಲು ಅಥವಾ ಪರೋಕ್ಷ ಸಮ್ಮತಿಯು ಇರುವುದಿಲ್ಲ.

ಆದುದರಿಂದ ನಿಮ್ಮ ಅರ್ಜಿದಾರಳು ಸದರಿ ವಿವಾಹವನ್ನು ಅನೂರ್ಜಿತ ಮತ್ತು ಶೂನ್ಯವೆಂದು ಘೋಷಿಸುವಂತೆ ಈ (ಮಾನ್ಯ) ನ್ಯಾಯಾಲಯವನ್ನು ಪ್ರಾರ್ಥಿಸುತ್ತಾಳೆ.

(ರುಜು) ಎ.ಬಿ.

ಸತ್ಯಾಪನೆಯ ನಮೂನೆಗಾಗಿ: ಸಂಖ್ಯೆ 1ನ್ನು ನೋಡಿ.

-------

**ಸಂಖ್ಯೆ 5.– ಹೆಂಡತಿಯಿಂದ ಅವಳ ಗಂಡನ ಪರಸತಿ ಸಂಗದ ಕಾರಣದ ಮೇಲೆ ನ್ಯಾಯಿಕ ಪ್ರತ್ಯೇಕತೆಗಾಗಿ ಅರ್ಜಿ.**

(22ನೇ ಪ್ರಕರಣವನ್ನು ನೋಡಿ)

--- ದ (ಉಚ್ಚ) ನ್ಯಾಯಾಲಯದಲ್ಲಿ.

ಮಾನ್ಯ ಶ್ರೀ ನ್ಯಾಯಮೂರ್ತಿ ------ರಿಗೆ (ಅಥವಾ --------ದ ನ್ಯಾಯಾಧೀಶನಿಗೆ).

20 --------ದ ---------- ದಿವಸ ----------

ಎ.ಬಿ. ನ ಹೆಂಡತಿಯಾದ ----- ಸಿ.ಬಿ.ಳ ಅರ್ಜಿಯು ಈ ಕೆಳಕಂಡಂತಿದೆ.

1. ಸಾವಿರದೊಂಬೈನೂರಾ ------ರ ------ ದ ------ ದಿವಸದಂದು ಆಗ ಸಿ.ಡಿ ಆಗಿದ್ದ ನಿಮ್ಮ ಅರ್ಜಿದಾರಳು ಎ.ಬಿ. ನೊಂದಿಗೆ ----- ನಲ್ಲಿನ ಚರ್ಚಿನಲ್ಲಿ ಕಾನೂನುಸಮ್ಮತವಾಗಿ ವಿವಾಹವಾದಳು.

2. ಸದರಿ ವಿವಾಹದ ತರುವಾಯ ನಿಮ್ಮ ಅರ್ಜಿದಾರಳು, ----ದಲ್ಲಿ ಸದರಿ ಎ.ಬಿ. ನೊಂದಿಗೆ ಸಹವಾಸದಲ್ಲಿದ್ದಳು ಮತ್ತು ನಿಮ್ಮ ಅರ್ಜಿದಾರಳು ಮತ್ತು ಅವಳ ಸದರಿ ಗಂಡನು ಸದರಿ ವಿವಾಹದಿಂದ -----, ------------ ಮತ್ತು --------- ವಯಸ್ಸಿನ ಮೂರು ಜೀವಂತ ಮಕ್ಕಳನ್ನು ಪಡೆದಿದ್ದಾರೆ.

3. ಸಾವಿರದ ಒಂಬೈನೂರ ------ ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಅಥವಾ ಆ ಸುಮಾರಿನಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಸದರಿ ಎ.ಬಿ.ನು ಹಿಂದೆ ಹೇಳಿದ ----ದಲ್ಲಿ ಸದರಿ ಎ.ಬಿ.ನ ಸೇವೆಯಲ್ಲಿ ಆಗ ಜೀವಿಸುತ್ತಿದ್ದ ಇ.ಎಫ್. ಳೊಂದಿಗೆ ಮತ್ತು ನಿಮ್ಮ ಅರ್ಜಿದಾರಳೊಂದಿಗೆ ಹಿಂದೆ ಹೇಳಿದ --------- ಅವರ ಸದರಿ ನಿವಾಸದಲ್ಲಿ ಪರಸತಿ ಸಂಗವನ್ನು ಮಾಡಿರುತ್ತಾನೆ.

4. ಸಾವಿರದ ಒಂಬೈನೂರ ---- ದ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಸದರಿ ಎ.ಬಿ.ನು, ಹಿಂದೆ ಹೇಳಿದ ---- ದಲ್ಲಿ ಸದರಿ ಎ.ಬಿ. ನ ಸೇವೆಯಲ್ಲಿ ಆಗ ಜೀವಿಸುತ್ತಿದ್ದ ಜಿ.ಹೆಚ್. ಗಳೊಂದಿಗೆ ಮತ್ತು ನಿಮ್ಮ ಅರ್ಜಿದಾರಳೊಂದಿಗೆ ಹಿಂದೆ ಹೇಳಿದ ---- ಅವರ ಸದರಿ ನಿವಾಸದಲ್ಲಿ ಪರಸತಿ ಸಂಗವನ್ನು ಮಾಡಿರುತ್ತಾನೆ.

5. ಹಾಲಿ ದಾವೆಯ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಅರ್ಜಿದಾರಳು ಮತ್ತು ಸದರಿ ಎ.ಬಿ. ನ ನಡುವೆ ಯಾವುದೇ ಶಾಮೀಲು ಅಥವಾ ಪರೋಕ್ಷ ಸಮ್ಮತಿಯು ಇರುವುದಿಲ್ಲ.

ಆದುದರಿಂದ, ನಿಮ್ಮ ಅರ್ಜಿದಾರಳು, ಹಿಂದೆ ಹೇಳಿದ ಅವಳ ಗಂಡನ ಪರಸತಿ ಸಂಗದ ಕಾರಣದ ಮೇಲೆ ಸದರಿ ಅವಳ ಗಂಡನಿಂದ ಅರ್ಜಿದಾರಳಿಗೆ ನ್ಯಾಯಿಕ ಪ್ರತ್ಯೇಕತೆಯ ಡಿಕ್ರಿಯನ್ನು ಮಾಡುವಂತೆ ಮಾನ್ಯ ನ್ಯಾಯಾಲಯವನ್ನು ಪ್ರಾರ್ಥಿಸುತ್ತಾಳೆ.

(ರುಜು) ಸಿ. ಬಿ. (ಬಿ).

ಸತ್ಯಾಪನೆಯ ನಮೂನೆ ಸಂ. 1ನ್ನು ನೋಡಿ.

------

**ಸಂಖ್ಯೆ 6.– ಸಂಖ್ಯೆ 5ಕ್ಕೆ ಉತ್ತರವಾಗಿ ವಿವರಪತ್ರ.**

---------- ದ (ಉಚ್ಚ) ನ್ಯಾಯಾಲಯದಲ್ಲಿ.

ಬಿ ವಿರುದ್ಧ ಬಿ.

-------- ದ ------------ ದಿವಸ ಪ್ರತ್ಯರ್ಜಿದಾರನಾದ ಎ.ಬಿ. ನು ಅವನ ನ್ಯಾಯವಾದಿ ಅಥವಾ (ವಕೀಲ) ಡಬ್ಲ್ಯೂ.ವೈ.ನ ಮೂಲಕ ಹೀಗೆ ಹೇಳುತ್ತಾನೆ.

1. ಅರ್ಜಿಯ ಮೂರನೇ ಪ್ಯಾರಾದಲ್ಲಿ ಆಪಾದಿಸಿದಂತೆ ಇ.ಎಫ್. ಳೊಂದಿಗೆ ಪರಸತಿ ಸಂಗವನ್ನು ಅವನು ಮಾಡಿರುವನೆಂಬುದನ್ನು ಅವನು ನಿರಾಕರಿಸುತ್ತಾನೆ.

2. ಇ.ಎಫ್. ಳೊಂದಿಗೆ ಸದರಿ ಪರಸತಿ ಸಂಗವು ಯಾವುದಾದರೂ ಆಗಿದ್ದರೆ, ಅದನ್ನು ಅರ್ಜಿದಾರಳು ಮನ್ನಿಸಿರುತ್ತಾಳೆ.

3. ಅರ್ಜಿಯ ನಾಲ್ಕನೇ ಪ್ಯಾರಾದಲ್ಲಿ ಆಪಾದಿಸಿದಂತೆ ಜಿ.ಹೆಚ್. ಳೊಂದಿಗೆ ಪರಸತಿ ಸಂಗವನ್ನು ಅವನು ಮಾಡಿರುವನೆಂಬುದನ್ನು ನಿರಾಕರಿಸುತ್ತಾನೆ.

4. ಜಿ.ಹೆಚ್. ಳೊಂದಿಗೆ ಸದರಿ ಪರಸತಿ ಸಂಗವು ಯಾವುದಾದರೂ ಆಗಿದ್ದರೆ, ಅದನ್ನು ಅರ್ಜಿದಾರಳು ಮನ್ನಿಸಿರುತ್ತಾಳೆ.

ಆದುದರಿಂದ, ಈ ಪ್ರತ್ಯರ್ಜಿದಾರನು, ಸದರಿ ಅರ್ಜಿಯ ಪ್ರಾರ್ಥನೆಯನ್ನು ತಿರಸ್ಕರಿಸುವಂತೆ ಈ ಮಾನ್ಯ ನ್ಯಾಯಾಲಯವನ್ನು ಪ್ರಾರ್ಥಿಸುತ್ತಾನೆ.

(ರುಜು). ಎ.ಬಿ.

-----

**ಸಂಖ್ಯೆ 7.– ಸಂಖ್ಯೆ 6ಕ್ಕೆ ಉತ್ತರವಾಗಿ ವಿವರಪತ್ರ.**

-------- ದ (ಉಚ್ಚ) ನ್ಯಾಯಲಯದಲ್ಲಿ,

ಬಿ ವಿರುದ್ಧ ಬಿ

----- ದ --------- ದಿವಸ ಅರ್ಜಿದಾರಳಾದ ಸಿ.ಬಿ. ಳು ಅವಳ ನ್ಯಾಯವಾದಿ ಅಥವಾ (ವಕೀಲನ) ಮೂಲಕ ಹೇಳುತ್ತಾಳೆ.

1. ಅವಳು ಉತ್ತರದಲ್ಲಿರುವ ವಿವರಪತ್ರದ ಎರಡನೇ ಪ್ಯಾರಾದಲ್ಲಿ ಆಪಾದಿಸಿದಂತೆ ಇ.ಎಫ್. ಳೊಂದಿಗೆ ಪ್ರತ್ಯರ್ಜಿದಾರನ ಸದರಿ ಪರಸತಿ ಸಂಗವನ್ನು ಅವಳು ಮನ್ನಿಸಿರುವಳೆಂಬುದನ್ನು ನಿರಾಕರಿಸುತ್ತಾಳೆ.

2. ಅವಳು ಸದರಿ ಪರಸತಿ ಸಂಗವನ್ನು ಮನ್ನಿಸಿದ್ದರೂ ಅರ್ಜಿಯ ನಾಲ್ಕನೇ ಪ್ಯಾರಾದಲ್ಲಿ ನಿರೂಪಿಸಿರುವಂತೆ, ಜಿ.ಹೆಚ್. ಳೊಂದಿಗೆ ಪ್ರತ್ಯರ್ಜಿದಾರನ ತರುವಾಯದ ಪರಸತಿ ಸಂಗದ ಮೂಲಕ ಅದನ್ನು ಪುನಃ ಪ್ರಾರಂಭಿಸಿದ್ದಾನೆ.

(ರುಜು). ಸಿ.ಬಿ.

-----

## ಸಂಖ್ಯೆ 8.– ಕ್ರೌರ್ಯದ ಕಾರಣದಿಂದ ನ್ಯಾಯಿಕ ಪ್ರತ್ಯೇಕತೆಗಾಗಿ ಅರ್ಜಿ.

(22ನೇ ಪ್ರಕರಣವನ್ನು ನೋಡಿ)

------ದ (ಉಚ್ಚ) ನ್ಯಾಯಾಲಯದಲ್ಲಿ,

ಮಾನ್ಯ ಶ್ರೀ ನ್ಯಾಯಮೂರ್ತಿ -------- ಗೆ (ಅಥವಾ -------ದ ನ್ಯಾಯಾಧೀಶನಿಗೆ).

ಸಾವಿರದ ಒಂಬೈನೂರ ------ ರ ------ ದಿವಸ, ಎ.ಬಿ. ಳ (ಸಿ.ಬಿ. ನ ಹೆಂಡತಿ) ಅರ್ಜಿಯು ಈ ಕೆಳಕಂಡಂತಿದೆ.

1. ಸಾವಿರದ ಒಂಬೈನೂರ ------------ ದ --------------- ದ ದಿವಸದಂದು ನಿಮ್ಮ ಅರ್ಜಿದಾರಳಾದ ಎ.ಡಿ. ಳು ಅವಿವಾಹಿತೆಯಾಗಿದ್ದು, -------------- ದಲ್ಲಿ ಸಿ.ಬಿ. ಗೆ ಕಾನೂನುಸಮ್ಮತವಾಗಿ ವಿವಾಹವಾದಳು.

2. ಅವಳ ಸದರಿ ವಿವಾಹದಿಂದಾಗಿ ನಿಮ್ಮ ಅರ್ಜಿದಾರಳು ಅವಳ ಸದರಿ ಗಂಡನೊಂದಿಗೆ ----------- ದಲ್ಲಿ ಒಂದು ಸಾವಿರದ ಒಂಬೈನೂರ ----------------- ದ ---------------- ತಿಂಗಳ --------------- ದಿವಸದವರೆಗೆ ವಾಸಿಸುತ್ತಿದ್ದಳು ಮತ್ತು ಅವನ ಸಹವಾಸದಲ್ಲಿದ್ದಳು, ಆಗ ನಿಮ್ಮ ಅರ್ಜಿದಾರಳು ಇಲ್ಲಿ ಇನ್ನು ಮುಂದೆ ನಿರ್ದಿಷ್ಟವಾಗಿ ನಮೂದಿಸಿರುವಂತೆ ಅವಳ ಸದರಿ ಗಂಡನಿಂದ ಬೇರೆಯಾದಳು ಮತ್ತು ನಿಮ್ಮ ಅರ್ಜಿದಾರಳು ಮತ್ತು ಅವಳ ಸದರಿ ಗಂಡನಿಗೆ ಅವರ ಸದರಿ ವಿವಾಹದಿಂದ ಯಾವುದೇ ಮಗು ಆಗಿರಲಿಲ್ಲ.

3. ನಿಮ್ಮ ಅರ್ಜಿದಾರಳ ಸದರಿ ವಿವಾಹವಾದಂದಿನಿಂದ ಮತ್ತು ಆ ತರುವಾಯ ಸ್ವಲ್ಪ ಕಾಲದಲ್ಲೆ, ಸದರಿ ಸಿ.ಬಿ.ನು ಅವಳನ್ನು ಅತಿ ಒರಟಾದ ಮತ್ತು ಅತಿ ಅಪಮಾನಕರ ಭಾಷೆಯಲ್ಲಿ ಮೇಲಿಂದ ಮೇಲೆ ಬಯ್ಯುವ ಮೂಲಕ ಮತ್ತು ಅವನ ಮುಷ್ಠಿಗಳಿಂದ, ಬೆತ್ತದಿಂದ ಅಥವಾ ಯಾವುದೇ ಇತರ ಆಯುಧದಿಂದ ಹೊಡೆಯುವ ಮೂಲಕ ನಿಮ್ಮ ಅರ್ಜಿದಾರಳೊಂದಿಗೆ ಬಹಳ ನಿರ್ದಯ ಮತ್ತು ಕ್ರೌರ್ಯದಿಂದ ಅವನು ಸ್ವಭಾವಗತವಾಗಿ ನಡೆದುಕೊಂಡನು.

4. -----------ರ ------------ ತಿಂಗಳಿನಲ್ಲಿ ಅಥವಾ ಅದರ ಸರಿ ಸುಮಾರಿನಲ್ಲಿ ಒಂದು ಸಂಜೆ, ಸದರಿ ಸಿ.ಬಿ. ನು ಹೆದ್ದಾರಿಯಲ್ಲಿ ಮತ್ತು ಹಿಂದೆ ಹೇಳಿದ ----------- ದಲ್ಲಿ ನಿಮ್ಮ ಅರ್ಜಿದಾರಳು ಮತ್ತು ಸದರಿ ಸಿ.ಬಿ. ನು ಆಗ ವಾಸಿಸುತ್ತಿದ್ದಂಥ ಮನೆಯ ಎದುರು ನಿಮ್ಮ ಅರ್ಜಿದಾರಳನ್ನು ಕೆಳಗೆ ಕೆಡವಲು ಪ್ರಯತ್ನಿಸಿದ್ದನು ಮತ್ತು ಹಾಗೆ ಮಾಡುವುದನ್ನು ನಿಮ್ಮ ಅರ್ಜಿದಾರಳ ಸೋದರನಾದ ಎಫ್.ಡಿ. ನ ಮಧ್ಯಪ್ರವೇಶದಿಂದ ಮಾತ್ರ ತಡೆಗಟ್ಟಲಾಯಿತು.

5. ಆ ತರುವಾಯ ಅದೇ ಸಂಜೆ ಸದರಿ ಸಿ.ಬಿ. ನು ------------------- ದಲ್ಲಿನ ಅವನ ಸದರಿ ಮನೆಯಲ್ಲಿ ನಿಮ್ಮ ಅರ್ಜಿದಾರಳನ್ನು ಅವಳ ಮುಖದ ಮೇಲೆ ಅವನ ಬಿಗಿಮುಷ್ಟಿಯಿಂದ ಹಿಂಸಾತ್ಮಕವಾಗಿ ಹೊಡೆದನು.

6. ಒಂದು ಸಾವಿರದ ಒಂಬೈನೂರ -------------- ರ ---------------- ತಿಂಗಳಿನಲ್ಲಿ ಒಂದು ಶುಕ್ರವಾರದ ರಾತ್ರಿಯಂದು ಸದರಿ ಸಿ.ಬಿ. ನು ---------------- ನಲ್ಲಿ ಉದ್ರೇಕವಿಲ್ಲದೆ ನಿಮ್ಮ ಅರ್ಜಿದಾರಳ ಕಡೆಗೆ ಚಾಕುವನ್ನು ಎಸೆದನು. ಆ ಮೂಲಕ ಅವಳ ಬಲ ಕೈಯಿನ ಮೇಲೆ ತೀವ್ರ ಗಾಯವನ್ನು ಮಾಡಿದನು.

7. ----------------- ರ -------------- ತಿಂಗಳ -------------- ದಿವಸದ ಅಪರಾಹ್ನದಲ್ಲಿ ನಿಮ್ಮ ಅರ್ಜಿದಾರಳು, ಅವಳ ಸದರಿ ಗಂಡನು ಅವಳ ಬಗ್ಗೆ ನಡೆಸಿದ ತೀವ್ರ ಮತ್ತು ಮುಂದುವರೆದ ಕ್ರೌರ್ಯದಿಂದಾಗಿ, ಸದರಿ ಅವಳ ಗಂಡನ ಮನೆಯ ಸಹಾಯದೊಂದಿಗೆ ----------- ದಲ್ಲಿನ ಅವಳ ತಂದೆಯ ಮನೆಗೆ ಹಿಂದಿರುಗಿದಳು. ಒಂದು ಸಾವಿರದ ಒಂಬೈನೂರ ----------------- ರ ----------- ತಿಂಗಳ -------------- ಸದರಿ ದಿವಸದಿಂದ ಮತ್ತು ಆ ತರುವಾಯ ನಿಮ್ಮ ಅರ್ಜಿದಾರಳು ಅವಳ ಸದರಿ ಗಂಡನಿಂದ ಪ್ರತ್ಯೇಕವಾಗಿ ಮತ್ತು ಬೇರೆಯಾಗಿ ವಾಸಿಸಿರುವಳು ಮತ್ತು ಅವನ ಮನೆಗೆ ಯಾವತ್ತೂ ಹಿಂದಿರುಗಲಿಲ್ಲ ಅಥವಾ ಅವನೊಡನೆ ಸಹವಾಸ ಮಾಡಲಿಲ್ಲ.

8. ಹಾಲಿ ದಾವೆಯ ವಿಷಯಕ್ಕೆ ಸಂಬಂಧಿಸಿದಂತೆ, ನಿಮ್ಮ ಅರ್ಜಿದಾರಳು ಮತ್ತು ಅವಳ ಗಂಡನ ನಡುವೆ ಶಾಮೀಲು ಅಥವಾ ಪರೋಕ್ಷ ಸಮ್ಮತಿ ಇರುವುದಿಲ್ಲ.

ಆದುದರಿಂದ, ನಿಮ್ಮ ಅರ್ಜಿದಾರಳು, ನಿಮ್ಮ ಅರ್ಜಿದಾರಳು ಮತ್ತು ಸದರಿ ಸಿ.ಬಿ. ನ ನಡುವೆ ನ್ಯಾಯಿಕ ಪ್ರತ್ಯೇಕೀಕರಣದ ಡಿಕ್ರಿಯನ್ನು ಮಾಡಲು ಮತ್ತು ಸದರಿ ಸಿ.ಬಿ. ನು ಈ ವ್ಯವಹರಣೆಗಳ ಮತ್ತು ಅವುಗಳಿಗೆ ಪ್ರಾಸಂಗಿಕವಾದ ಖರ್ಚುಗಳನ್ನು ಸಂದಾಯ ಮಾಡಲು ಸಹ ಆದೇಶಿಸುವಂತೆ ಈ (ಮಾನ್ಯ) ನ್ಯಾಯಾಲಯವನ್ನು ಪ್ರಾರ್ಥಿಸುತ್ತಾಳೆ.

(ರುಜು) ಎ.ಬಿ.

ಸತ್ಯಾಪನೆಯ ನಮೂನೆ ಸಂ. 1ನ್ನು ನೋಡಿ

----------

## ಸಂಖ್ಯೆ 9.– ಸಂಖ್ಯೆ 8ಕ್ಕೆ ಉತ್ತರವಾಗಿ ವಿವರಪತ್ರ

------------------- ರ (ಉಚ್ಚ) ನ್ಯಾಯಾಲಯದಲ್ಲಿ,–

------- ದ --------- ದಿವಸದಲ್ಲಿ

ಅರ್ಜಿದಾರ ಎ.ಬಿ. ಮತ್ತು ಪ್ರತ್ಯರ್ಜಿದಾರ

ಸಿ.ಬಿ. ಇವರ ನಡುವೆ

ಪ್ರತ್ಯರ್ಜಿದಾರನಾದ ಸಿ.ಬಿ. ನು, ಅವನ ನ್ಯಾಯವಾದಿ (ಅಥವಾ ವಕೀಲನು) ಡಬ್ಲ್ಯೂ.ಜೆ. ನು ಪ್ರಕರಣದಲ್ಲಿ ದಾಖಲು ಮಾಡಿದ ಅರ್ಜಿಗೆ ಉತ್ತರವಾಗಿ, ಸದರಿ ಅರ್ಜಿಯಲ್ಲಿ ಆಪಾದಿಸಿದಂತೆ ಸದರಿ ಎ.ಬಿ. ಳ ಬಗ್ಗೆ ಅವನು ಕ್ರೌರ್ಯದ ತಪ್ಪಿತಸ್ಥನಾಗಿದ್ದಾನೆಂಬುದನ್ನು ಅಲ್ಲಗೆಳೆಯುತ್ತಾನೆಂದು ಹೇಳುತ್ತಾನೆ.

(ರುಜು) ಸಿ.ಬಿ.

------

## ಸಂಖ್ಯೆ 10.– ಪ್ರತ್ಯೇಕೀಕರಣದ ಡಿಕ್ರಿಯ ವಿಪರ್ಯಯಕ್ಕಾಗಿ ಅರ್ಜಿ

(24ನೇ ಪ್ರಕರಣವನ್ನು ನೋಡಿ)

----------------- ದ (ಉಚ್ಚ) ನ್ಯಾಯಾಲಯದಲ್ಲಿ ------------ ಮಾನ್ಯ ಶ್ರೀ ನ್ಯಾಯಮೂರ್ತಿಗಳಿಗೆ (ಅಥವಾ -------------------- ದ ನ್ಯಾಯಾಧೀಶನಿಗೆ).

ಒಂದು ಸಾವಿರದ ಒಂಬೈನೂರ ---------------- ರ ------------- ತಿಂಗಳ ------------------- ದಿವಸ ಎ.ಬಿ.ನ ಅರ್ಜಿ ಈ ಕೆಳಕಂಡಂತೆ ಇದೆ.

1. ನಿಮ್ಮ ಅರ್ಜಿದಾರನು ------------------- ರ ----------- ದಿವಸದಂದು ------------------ ಅವರನ್ನು ಕಾನೂನುಸಮ್ಮತವಾಗಿ ವಿವಾಹವಾದನು.

2. -------------------ದ ದಿವಸದಂದು ಈ ಮಾನ್ಯ ನ್ಯಾಯಾಲಯವು ------------------ ನ ಅರ್ಜಿಯ ಮೇಲೆ ಈ ಕೆಳಕಂಡ ಪರಿಣಾಮವುಳ್ಳಂತೆ ಅರ್ಜಿದಾರನಿಗೆ ಬಾಧಕವನ್ನುಂಟು ಮಾಡುವ ಡಿಕ್ರಿಯನ್ನು ಉಚ್ಚರಿಸಿತು. ಎಂದರೆ:–

(ಇಲ್ಲಿ ಡಿಕ್ರಿಯನ್ನು ನಿರೂಪಿಸಿ)

3. ಆಗ ------------ (ಸ್ಥಳ)ದಲ್ಲಿ ವಾಸಿಸುತ್ತಿದ್ದ ನಿಮ್ಮ ಅರ್ಜಿದಾರನ ಗೈರುಹಾಜರಿಯಲ್ಲಿ ಅಂಥ ಡಿಕ್ರಿಯನ್ನು ಪಡೆದುಕೊಳ್ಳಲಾಯಿತು.

[ಅರ್ಜಿದಾರನಿಗೆ ಆ ವ್ಯವಹರಣೆಗಳು ತಿಳಿದಿರಲಿಲ್ಲ ಎಂಬುದನ್ನು ಮತ್ತು ಇನ್ನೂ ಹೆಚ್ಚಾಗಿ ಅವನಿಗೆ ತಿಳಿದಿದ್ದರೆ ಅವನು ಸಾಕಷ್ಟು ಪ್ರತಿರಕ್ಷೆಯನ್ನು ಕೊಡಬಹುದಾಗಿತ್ತು ಎಂಬುದನ್ನು ತೋರಿಸುವ ಸಂಗತಿಗಳನ್ನು ನಿರೂಪಿಸತಕ್ಕದ್ದು.]

ಅಥವಾ

ನಿಮ್ಮ ಅರ್ಜಿದಾರನು ಅವನ ಸದರಿ ಹೆಂಡತಿಯನ್ನು ಬಿಡುವುದಕ್ಕಾಗಿ ಯುಕ್ತ ಕಾರಣವಿತ್ತು, ಏಕೆಂದರೆ ಅವನ ಸದರಿ ಹೆಂಡತಿಯು ---------------------- [ಇಲ್ಲಿ ಅವನ ಹೆಂಡತಿಯಿಂದ ಅರ್ಜಿದಾರನು ಪ್ರತ್ಯೇಕೀಕರಣವನ್ನು ಸಮರ್ಥಿಸುವ ಯಾವುದೇ ಕಾನೂನುಸಮ್ಮತ ಕಾರಣವನ್ನು ನಿರೂಪಿಸಿ.]

ಆದುದರಿಂದ, ನಿಮ್ಮ ಅರ್ಜಿದಾರನು, ಸದರಿ ಡಿಕ್ರಿಯನ್ನು ವಿಪರ್ಯಯಗೊಳಿಸಬೇಕೆಂದು ಈ (ಮಾನ್ಯ) ನ್ಯಾಯಾಲಯವನ್ನು ಪ್ರಾರ್ಥಿಸುತ್ತಾನೆ.

(ರುಜು) ಕ.ಖ.

ಸತ್ಯಾಪನೆಯ ನಮೂನೆ ಸಂ. 1ನ್ನು ನೋಡಿ

-----

**ಸಂಖ್ಯೆ 11.– ಸಂರಕ್ಷಣಾ ಆದೇಶಕ್ಕಾಗಿ ಅರ್ಜಿ**

(27ನೇ ಪ್ರಕರಣವನ್ನು ನೋಡಿ)

-------------------- ದ (ಉಚ್ಚ) ನ್ಯಾಯಲಯದಲ್ಲಿ,–

--------------- ಮಾನ್ಯ ಶ್ರೀ ನ್ಯಾಯಮೂರ್ತಿಗಳಿಗೆ (ಅಥವಾ ------------------ ನ್ಯಾಯಾಧೀಶನಿಗೆ), ಒಂದು ಸಾವಿರದ ಒಂಬೈನೂರ ------- ತಿಂಗಳ ------- ದಿವಸದಂದು ಎ.ಬಿ. ನ ಹೆಂಡತಿಯಾದ ಸಿ.ಬಿ. ಯ ಅರ್ಜಿಯು -----

ಈ ಕೆಳಕಂಡಂತೆ ಇದೆ.

----------------------- ದಲ್ಲಿ ------------------ ದಿವಸದಂದು, ಅವಳು ------------------------ ದಲ್ಲಿ ಎ.ಬಿ. ನನ್ನು ಕಾನೂನುಸಮ್ಮತವಾಗಿ ವಿವಾಹವಾದಳು.

--------------------- ದಲ್ಲಿ ಮತ್ತು --------------- ದಲ್ಲಿಯೂ ಸಹ ಅವಳು -------------- ವರ್ಷಗಳವರೆಗೆ ಸದರಿ ಎ.ಬಿ. ನೊಂದಿಗೆ ವಾಸ ಮಾಡಿದ್ದಾಳೆ ಮತ್ತು ಅವನ ಸಹವಾಸದಲ್ಲಿದ್ದಳು ಮತ್ತು ಅವಳ ಸದರಿ ವಿವಾಹದ ಸಂತಾನವಾಗಿ --------------- ಮಕ್ಕಳನ್ನು ಹೊಂದಿರುತ್ತಾಳೆ. ಅವರ ಪೈಕಿ ------------------------ ಅವರು ಅರ್ಜಿದಾರಳೊಂದಿಗೆ ಈಗ ವಾಸಿಸುತ್ತಿದ್ದಾರೆ ಮತ್ತು ಅವರು ಅವಳ ಗಳಿಕೆಗಳ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದ್ದಾರೆ.

----------- ರಂದು ಅಥವಾ ಆ ಸುಮಾರಿನಲ್ಲಿ ಸದರಿ ಎ.ಬಿ. ನು ಯಾವುದೇ ಯುಕ್ತ ಕಾರಣವಿಲ್ಲದೆ ಅರ್ಜಿದಾರಳನ್ನು ತ್ಯಜಿಸಿದ್ದಾನೆ ಮತ್ತು ಆ ಲಾಗಾಯ್ತಿನಿಂದ ಅವಳಿಂದ ಪ್ರತ್ಯೇಕವಾಗಿ ಮತ್ತು ಬೇರೆಯಾಗಿ ಇದ್ದಾನೆ.

ಅವಳ ಸದರಿ ಗಂಡನು ತ್ಯಜಿಸಿದಂದಿನಿಂದ, ಅರ್ಜಿದಾರಳು ಸಂದರ್ಭಾನುಸಾರ ಅವಳ ಸ್ವಂತ ದುಡಿಮೆ ಅಥವಾ ಅವಳ ಸ್ವಂತ ಸ್ವತ್ತಿನಿಂದ ಅವಳನ್ನು ಪೋಷಿಸಿಕೊಂಡಿದ್ದಾಳೆ ಮತ್ತು ಅದರ ಮೂಲಕ ಮತ್ತು ಅನ್ಯಥಾ ----------------- ಒಳಗೊಂಡ ಕೆಲಸವು ಸ್ವತ್ತನ್ನು ಅರ್ಜಿಸಿದ್ದಾಳೆ. (ಇಲ್ಲಿ ಆ ಸ್ವತ್ತಿನ ಸ್ವರೂಪವನ್ನು ಸಾಮಾನ್ಯವಾಗಿ ನಿರೂಪಿಸಿ).

ಆದುದರಿಂದ, ಅವಳು --------------------- ದ ಸದರಿ ದಿವಸದಿಂದ ಅರ್ಜಿಸಿದ ಅವಳ ಗಳಿಕೆಗಳು ಮತ್ತು ಸ್ವತ್ತನ್ನು ಸದರಿ ಎ.ಬಿ. ಮತ್ತು ಅವನ ಅಡಿಯಲ್ಲಿ ಕ್ಲೇಮು ಮಾಡುವ ಎಲ್ಲ ಸಾಲಗಾರರು ಮತ್ತು ವ್ಯಕ್ತಿಗಳಿಂದ ಸಂರಕ್ಷಿಸುವುದಕ್ಕಾಗಿ ಆದೇಶವನ್ನು ಪ್ರಾರ್ಥಿಸುತ್ತಾಳೆ.

(ರುಜು). ಸಿ.ಬಿ.

-----

**ಸಂಖ್ಯೆ 12.– ದಾವೆಯು ಇತ್ಯರ್ಥದಲ್ಲಿರುವಾಗ ವಾದಕಾಲೀನ ಜೀವನಾಂಶಕ್ಕಾಗಿ ಅರ್ಜಿ**

(36ನೇ ಪ್ರಕರಣವನ್ನು ನೋಡಿ).

------------- ದ (ಉಚ್ಚ) ನ್ಯಾಯಾಲಯದಲ್ಲಿ.

ಬಿ ವಿರುದ್ಧ ಬಿ

-------- ಮಾನ್ಯ ಶ್ರೀ ನ್ಯಾಯಮೂರ್ತಿ ---- ರಿಗೆ (ಅಥವಾ -------- ನ್ಯಾಯಾಧೀಶನಿಗೆ),

ಒಂದು ಸಾವಿರದ ಒಂಬೈನೂರ ------ ದ ದಿವಸದಂದು ಎ.ಬಿ. ನ ಕಾನೂನುಸಮ್ಮತ ಹೆಂಡತಿಯಾದ ಸಿ.ಬಿ. ಳ ಅರ್ಜಿ.

ಈ ಕೆಳಕಂಡಂತಿದೆ:–

1. ಸದರಿ ಎ.ಬಿ. ನು ಕೆಲವು ವರ್ಷಗಳಿಂದ ------------- ದಲ್ಲಿ ವ್ಯವಹಾರವನ್ನು ನಡೆಸಿದ್ದಾನೆ ಮತ್ತು ಅಂಥ ವ್ಯವಹಾರದಿಂದ 4,000 ರೂ. ಗಳಿಂದ 5,000 ರೂ. ಗಳವರೆಗೆ ನಿವ್ವಳ ವಾರ್ಷಿಕ ಆದಾಯವನ್ನು ಪಡೆಯುತ್ತಿದ್ದಾನೆ.

2. ಸದರಿ ಎ.ಬಿ. ನು ಹಿಂದೆ ಹೇಳಿದ --------------- ಅವನ ಸದರಿ ಮನೆಯಲ್ಲಿ ಪ್ಲೇಟು, ಪಿಠೋಪಕರಣ, ಬಟ್ಟೆ ಮತ್ತು ಇತರ ವಸ್ತುಗಳನ್ನು ಹೊಂದಿದ್ದಾನೆ; ಅವುಗಳೆಲ್ಲವನ್ನು ಅವನು, ಅವನ ಹೆಂಡತಿಯಾಗಿ ನಿಮ್ಮ ಅರ್ಜಿದಾರಳ ಹಕ್ಕಿನಲ್ಲಿ ಆರ್ಜಿಸಿದ್ದಾನೆ ಅಥವಾ ಅವಳ ಮೂಲಕ ಅವನು ಆರ್ಜಿಸಿದ 10,000 ರೂಪಾಯಿಗಳ ಮೌಲ್ಯದ ಹಣದಿಂದ ಖರೀದಿಸಿದ್ದಾನೆ.

3. ಸದರಿ ಎ.ಬಿ. ನು ಅವನ ತಂದೆಯ ಮರಣಶಾಸನದ ಮೇರೆಗೆ, ಅದರಲ್ಲಲಿ, ಅವನ ತಾಯಿಯ ಅಜೀವ ಹಿತಾಸಕ್ತಿಗೊಳಪಟ್ಟು, 5,000 ರೂ. ಮೌಲ್ಯದ ಸ್ವತ್ತಿಗೆ ಅಥವಾ ಯಾವುದೇ ಇತರ ಗಣನೀಯ ಮೊಬಲಗಿಗೆ ಹಕ್ಕುಳ್ಳವನಾಗಿದ್ದಾನೆ. (ಅರ್ಜಿದಾರಳು ಅವಳ ಗಂಡನ ಆದಾಯವನ್ನು ಸಾಧ್ಯವಾದಷ್ಟು ಕರಾರುವಾಕ್ಕಾಗಿ ನಿರೂಪಿಸತಕ್ಕದ್ದು).

ಆದುದರಿಂದ, ನಿಮ್ಮ ಅರ್ಜಿದಾರಳು, ಈ (ಮಾನ್ಯ) ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂಥ, ದಾವೆಯು ಇತ್ಯರ್ಥದಲ್ಲಿರುವಾಗ ವಾದಕಾಲೀನ ಜೀವನಾಂಶವಾಗಿ ಹಣದ ಮೊತ್ತ ಅಥವಾ ಮೊತ್ತಗಳನ್ನು ಡಿಕ್ರಿ ಮಾಡಲು ಈ (ಮಾನ್ಯ) ನ್ಯಾಯಾಲಯವನ್ನು ಪ್ರಾರ್ಥಿಸುತ್ತಾಳೆ.

(ರುಜು). ಸಿ.ಬಿ.

ಸತ್ಯಾಪನೆಯ ನಮೂನೆ ಸಂ. 1ನ್ನು ನೋಡಿ

-----

## ಸಂಖ್ಯೆ 13.– ಸಂಖ್ಯೆ 12ಕ್ಕೆ ಉತ್ತರವಾಗಿ ವಿವರಪತ್ರ

------------------ ದ (ಉಚ್ಚ) ನ್ಯಾಯಾಲಯದಲ್ಲಿ,

ಬಿ ವಿರುದ್ಧ ಬಿ

ಮೇಲೆ ಹೇಳಿದ ಪ್ರತ್ಯರ್ಜಿದಾರನಾದ ---------- ದ ಎ.ಬಿ. ನು ಸಿ.ಬಿ.ಳ ದಾವೆಯು ಇತ್ಯರ್ಥದಲ್ಲಿರುವಾಗ ವಾದಕಾಲೀನ ಜೀವನಾಂಶಕ್ಕಾಗಿ ಅರ್ಜಿಗೆ ಉತ್ತರವಾಗಿ ಹೀಗೆ ಹೇಳುತ್ತಾನೆ:–

1. ಸದರಿ ಅರ್ಜಿಯ ಒಂದನೇ ಪ್ಯಾರಾಕ್ಕೆ ಉತ್ತರವಾಗಿ -------- ದಲ್ಲಿ ----------- ನ ವ್ಯವಹಾರವನ್ನು ಹಿಂದಿನ ಮೂರು ವರ್ಷಗಳವರೆಗೆ ನಡೆಸಿರುತ್ತೇನೆಂದು ಮತ್ತು ಸದರಿ ವ್ಯವಹಾರದಿಂದ ನಾನು 1,000 ರೂಪಾಯಿಗಳಿಗೆ ಕಡಿಮೆ ಇರುವ 900 ರೂಪಾಯಿಗಳ ನಿವ್ವಳ ವಾರ್ಷಿಕ ಆದಾಯವನ್ನು ಪಡೆದಿರುತ್ತೇನೆಂದು ಹೇಳುತ್ತೇನೆ.

2. ಸದರಿ ಅರ್ಜಿಯ ಎರಡನೇ ಪ್ಯಾರಾಕ್ಕೆ ಉತ್ತರವಾಗಿ, ನಾನು ಹೇಳುವುದೇನೆಂದರೆ, ಹಿಂದೆ ಹೇಳಿದ ------- ಸದರಿ ಮನೆಯಲ್ಲಿ 7,000 ರೂ. ಮೌಲ್ಯದ, ಆದರೆ ಅದಕ್ಕಿಂತ ಹೆಚ್ಚಿನ ಮೌಲ್ಯದವುಗಳಲ್ಲವೆಂದು ನಾನು ನಿಜವಾಗಿ ನಂಬುವಂತೆ, ಪ್ಲೇಟು, ಪಿಠೋಪಕರಣ, ಬಟ್ಟೆಬರೆ ಮತ್ತು ಇತರ ಚರಸ್ವತ್ತುಗಳು ಮತ್ತು ಸಾಮಾನುಗಳನ್ನು ಹೊಂದಿರುವೆನೆಂದು ಹೇಳುತ್ತೇನೆ ಮತ್ತು 1500 ರೂಪಾಯಿಗಳ ಮೌಲ್ಯದ ಸದರಿ ಪ್ಲೇಟು, ಪೀಠೋಪಕರಣ ಮತ್ತು ಇತರ ಚರಸ್ವತ್ತು ಮತ್ತು ಸಾಮಾನುಗಳ ಒಂದು ಭಾಗವು ನಮ್ಮ ವಿವಾಹಕ್ಕೆ ಮುಂಚೆ ಸದರಿ ನನ್ನ ಹೆಂಡತಿಗೆ ಸೇರಿತ್ತೆಂದು; ಅದರ ಉಳಿದ ಭಾಗವನ್ನು ಆ ತರುವಾಯ ನಾನು ನನ್ನ ಸ್ವಂತ ಹಣದಿಂದ ಖರೀದಿಸಿದ್ದೇನೆಂದು ನಾನು ಹೇಳುತ್ತೇನೆ ಮತ್ತು ಇಲ್ಲಿ ಈ ಹಿಂದೆ ವಿವರಿಸಿರುವಂತೆ ಹೊರತು, ಸದರಿ ಅರ್ಜಿಯಲ್ಲಿನ ಸದರಿ ಪ್ಯಾರಾದಲ್ಲಿ ಆಪಾದಿಸಿರುವಂತೆ ಪ್ಲೇಟು ಮತ್ತು ಇತರ ಸಾಮಾನುಗಳನ್ನು ನಾನು ಹೊಂದಿಲ್ಲ ಮತ್ತು ಸದರಿ ಅರ್ಜಿಯಲ್ಲಿ ನಮೂದಿಸಿರುವಂತೆಯೂ ಸಹ ಅವುಗಳನ್ನು ನಾನು ಆರ್ಜಿಸಿಲ್ಲವೆಂದು ಹೇಳುತ್ತೇನೆ.

3. ನನ್ನ ತಂದೆಯ ಮರಣಶಾಸನದ ಮೇರೆಗೆ ಅದರಲ್ಲಿ ನನ್ನ ತಾಯಿಯ ಆಜೀವ ಹಿತಾಸಕ್ತಿಗೊಳಪಟ್ಟು, ನಾನು 5,000 ರೂಪಾಯಿಗಳ ಮೌಲ್ಯದ ಸ್ವತ್ತಿಗೆ ಹಕ್ಕುಳ್ಳವನಾಗಿದ್ದೇನೆಂದು ನಾನು ಒಪ್ಪಿಕೊಳ್ಳುತ್ತೇನೆ; ಎಂದರೆ, ನನ್ನ ತಾಯಿಯ ಮರಣಾನಂತರ, ಸದರಿ ನನ್ನ ತಂದೆಯ ಮರಣಶಾಸನದ ಮೇರೆಗೆ 7,000 ರೂಪಾಯಿಗಳ ಮರಣಶಾಸನ ಸ್ವತ್ತಿಗೆ ನಾನು ಹಕ್ಕುಳ್ಳವನಾಗುವೆನು, ಆದುದರಿಂದ ನಾನು ನನ್ನ ತಂದೆಯ ಮರಣಶಾಸನದ ನಿರ್ವಾಹಕರಿಗೆ 2,000 ರೂಪಾಯಿಗಳ ಮೊತ್ತವನ್ನು; ಇದು ಅವನ

ಸಂಪದಕ್ಕೆ ನಾನು ಕೊಡಬೇಕಾಗಿರುವ ಋಣದ ಮೊಬಲಗು ಆಗಿದೆ ಮತ್ತು ಅದರ ಮೇಲೆ ನಾನು ಈಗ ಪ್ರತಿ ವರ್ಷಕ್ಕೆ ಶೇಕಡಾ 5ರ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡುತ್ತಿದ್ದೇನೆ.

4. ಮತ್ತು ಸದರಿ ಅರ್ಜಿಗೆ ಇನ್ನೂ ಹೆಚ್ಚಿನ ಉತ್ತರವಾಗಿ, ಹಿಂದೆ ಹೇಳಿದ ನನ್ನ ವ್ಯವಹಾರದಿಂದ ಪಡೆದುದನ್ನು ಹೊರತುಪಡಿಸಿ, ಬೇರೆ ಯಾವುದೇ ತೆರನಾದ ಆದಾಯವು ನನಗಿಲ್ಲ ಎಂದು, ಅಂಥ ಆದಾಯವು ಸದರಿ ನನ್ನ ಹೆಂಡತಿಯು ನನ್ನನ್ನು ಬಿಟ್ಟಂದಿನಿಂದ, ಎಂದರೆ ಹಿಂದಿನ ----- ದ ------- ದಿವಸದಂದು ಬಿಟ್ಟಳು, ಗಣನೀಯವಾಗಿ ಇಳಿದಿದೆ ಎಂದು ಮತ್ತು ಅಂಥ ಇಳಿಯುವಿಕೆಯು ಮುಂದುವರಿಯುವ ಸಂಭವವಿದೆ ಎಂದು ನಾನು ಹೇಳುತ್ತೇನೆ ಮತ್ತು ಸದರಿ ನನ್ನ ಆದಾಯದಿಂದ, ದಿವಂಗತ ನನ್ನ ತಂದೆಯ ನಿರ್ವಾಹಕರಿಗೆ ಹಿಂದೆ ಹೇಳಿದಂತೆ ಅಂಥ ಬಡ್ಡಿಗಾಗಿ 100 ರೂಪಾಯಿಗಳ ವಾರ್ಷಿಕ ಮೊತ್ತವನ್ನು ನಾನು ಸಂದಾಯ ಮಾಡಬೇಕಾಗಿದೆ ಎಂದು ಮತ್ತು ನಾನು ನನ್ನನ್ನು ಮತ್ತು ನನ್ನ ಎರಡು ಹಿರಿಯ ಮಕ್ಕಳನ್ನು ಸಹ ಸಲಹಬೇಕಾಗಿದೆ ಎಂದು ಸಹ ನಾನು ಹೇಳುತ್ತೇನೆ.

5. ಮತ್ತು ಸದರಿ ಅರ್ಜಿಗೆ ಇನ್ನು ಹೆಚ್ಚಿನ ಉತ್ತರವಾಗಿ, ಹಿಂದಿನ --- ದ -------- ದಿವಸದಂದು ನನ್ನ ಹೆಂಡತಿಯು ನನ್ನ ವಾಸದ ಮನೆಯನ್ನು ಬಿಟ್ಟಾಗ ಅವಳು ತನ್ನೊಂದಿಗೆ ಕನಿಷ್ಠ ಪಕ್ಷ 800 ರೂಪಾಯಿಗಳ ಮೌಲ್ಯದ್ದೆಂದು ನಾನು ನಿಜವಾಗಿ ನಂಬುವ, ಈ ನನ್ನ ಉತ್ತರದ ಎರಡನೇ ಪ್ಯಾರಾದಲ್ಲಿ ನಮೂದಿಸಿರುವ ಪ್ಲೇಟು, ಕೈಗಡಿಯಾರಗಳು ಮತ್ತು ಇತರ ಸಾಮಾನುಗಳನ್ನು ತೆಗೆದುಕೊಂಡು ಹೋಗಿದ್ದಾಳೆ; ಮತ್ತು ಅಂದಿನಿಂದ ಅವುಗಳನ್ನು ನನಗೆ ಕೊಡದೆ ಇಟ್ಟುಕೊಂಡಿದ್ದಾಳೆ ಮತ್ತು ಈಗಲೂ ನನಗೆ ಕೊಡದೆ ಇಟ್ಟುಕೊಂಡಿದ್ದಾಳೆ ಎಂದು ಹೇಳುತ್ತೇನೆ; ಮತ್ತು ಹಿಂದೆ ಹೇಳಿದಂತೆ ನನ್ನ ಮನೆಯಿಂದ ಅವಳು ನಿರ್ಗಮಿಸಿದ ಐದು ದಿವಸಗಳೊಳಗೆ ನನ್ನ ಸದರಿ ಹೆಂಡತಿಯು ಒಟ್ಟಿನಲ್ಲಿ ------ ರೂಪಾಯಿಗಳಾಗುವ ನನ್ನ ವಸತಿ ಗೃಹದ ನಿವಾಸಿಗಳಿಂದ ನನಗೆ ಬಾಕಿಯಿದ್ದ ಬಿಲ್ಲುಗಳನ್ನು ಸ್ವೀಕರಿಸಿದ್ದಾಳೆಂದು ಮತ್ತು ಅಂದಿನಿಂದ ಆ ಮೊತ್ತವನ್ನು ನನಗೆ ಕೊಡದೆ ಇಟ್ಟುಕೊಂಡಿದ್ದಾಳೆ ಮತ್ತು ಈಗಲೂ ಸಹ ಇಟ್ಟುಕೊಂಡಿದ್ದಾಳೆ ಎಂದು ಹೇಳುತ್ತೇನೆ.

(ರುಜು). ಎ.ಬಿ.

------

## ಸಂಖ್ಯೆ 14.– ಪ್ರತ್ಯರ್ಜಿದಾರನ/ಳ ಖರ್ಚುಗಳಿಗಾಗಿ ಜವಾಬ್ದಾರನಾದ ಅಪ್ರಾಪ್ತ ವಯಸ್ಕನ ವಾದಮಿತ್ರನಿಂದ ವಚನಬಂಧ.

(49ನೇ ಪ್ರಕರಣವನ್ನು ನೋಡಿ).

----------------- ದ (ಉಚ್ಚ) ನ್ಯಾಯಾಲಯದಲ್ಲಿ,

ಅಪ್ರಾಪ್ತ ವಯಸ್ಕನಾಗಿರುವ ಮತ್ತು ಭಾರತ ವಿವಾಹ ವಿಚ್ಛೇದನ ಅಧಿನಿಯಮದ ಮೇರೆಗೆ ಮತ್ತು ---------- ದ ಡಿ.ಡಿ.ನ ವಿರುದ್ಧ ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ದಾಖಲು ಮಾಡಲು ಇಚ್ಛಿಸುವ ಸಿ.ಡಿ.ನ ವಾದಮಿತ್ರನಾಗಿರುವ ---------- ದ, ಕೆಳಗೆ ರುಜು ಮಾಡಿರುವ ಎ.ಬಿ, ನಾದ ನಾನು, ಅಂಥ ದಾವೆಯಲ್ಲಿ ಸದರಿ ಡಿ.ಡಿ.ನ ಖರ್ಚುಗಳಿಗಾಗಿ ಜವಾಬ್ದಾರನಾಗಿರಲು ಮತ್ತು ಸದರಿ ಡಿ.ಡಿ.ನು, ಸದರಿ ಸಿ.ಡಿ. ನಿಗೆ ನ್ಯಾಯಾಲಯವು ಸದರಿ ಡಿ.ಡಿ.ನಿಗೆ ಸಂದಾಯ ಮಾಡಲು ಅವನಿಗೆ/ಅವಳಿಗೆ ನ್ಯಾಯಾಲಯವು ನಿರ್ದೇಶಿಸತಕ್ಕಂಥ ದಾವೆಯ ಅಂಥ ಎಲ್ಲಾ ಖರ್ಚುಗಳನ್ನು, ಆ ನ್ಯಾಯಾಲಯವು ಆದೇಶಿಸಿದಾಗ ಮತ್ತು ಅಂಥ ರೀತಿಯಲ್ಲಿ ಸಂದಾಯ ಮಾಡಲು ತಪ್ಪಿದರೆ ನಾನು ಈ ನ್ಯಾಯಾಲಯದ ಯುಕ್ತ ಅಧಿಕಾರಿಗೆ ಅವುಗಳನ್ನು ತಕ್ಷಣವೇ ಸಂದಾಯ ಮಾಡಲು ನಾನು ಈ ಮೂಲಕ ವಚನಬದ್ಧನಾಗುತ್ತೇನೆ.

ಒಂದು ಸಾವಿರದ ಒಂಬೈನೂರ ------------ ದ ------------ ದಿವಸ.

(ರುಜು). ಎ.ಬಿ.

-----